# www.karunaduexams.com

## ಪಂಚಾಯತ್ ಅಭಿವೃದ್ಧಿ ಅಧಿಕಾರಿ ಮತ್ತು ಕಾರ್ಯದರ್ಶಿ ಗ್ರೇಡ್-1 ಪೇಪರ್-2_2

www.karunaduexams.com

1. ನರೇಗಾ ಯೋಜನೆಯಡಿ ನೀಡಲಾಗುವ ಉದ್ಯೋಗ ಚೀಟಿಯಲ್ಲಿ ಇವುಗಳನ್ನು ನಮೂದಿಸಬೇಕು ______?

   I) ಕುಟುಂಬದ ಅರ್ಹ ವಯಸ್ಕ ಸದಸ್ಯರುಗಳ ಹೆಸರು

   II) ಭಾವಚಿತ್ರ

   III) ಬ್ಯಾಂಕ್ ಖಾತೆಯ ವಿವರ

   IV) ಕುಟುಂಬದ ವಿಳಾಸ

   ಸರಿಯಾದ ಉತ್ತರವನ್ನು ಕೋಡ್ ಮೂಲಕ ಗುರುತಿಸಿ:

   ಅ) I, II & III

   ಆ) I, II & IV

   ಇ) I, III & IV

   ಈ) ಮೇಲಿನ ಎಲ್ಲವೂ

   ಮೇಲಿನ ಎಲ್ಲವೂ

   ಎಂ.ಜಿ.ಎನ್.ಆರ್.ಜಿ.ಎ ಯೋಜನೆಯಡಿ ನೀಡಲಾಗುವ ಉದ್ಯೋಗ ಚೀಟಿಯಲ್ಲಿ ನೋಂದಾವಣಿ ಮಾಡಿಕೊಂಡಿರುವ ಕುಟುಂಬದ ವಯಸ್ಕರ ಹೆಸರು, ಭಾವಚಿತ್ರ, ಕುಟುಂಬ ಸದಸ್ಯರೊಬ್ಬರ ಬ್ಯಾಂಕ್ ಖಾತೆ ವಿವರ ಹಾಗೂ ಕುಟುಂಬದ ವಿಳಾಸವನ್ನು ಒಳಗೊಂಡಿರುತ್ತದೆ.

2. ವೆಂಕಟಪ್ಪ, ಆತನ ಪತ್ನಿ ಹಾಗೂ ಇಬ್ಬರು ವಯಸ್ಕ ಮಕ್ಕಳು ನರೇಗಾ ಯೋಜನೆಯಡಿ ನೋಂದಾಯಿಸಿಕೊಂಡಿದ್ದು, ವೆಂಕಟಪ್ಪನು ಆಕಾಲಿಕವಾಗಿ ಮರಣ ಹೊಂದಿದ್ದಾನೆ. ಇಂತಹ ಸಂದರ್ಭದಲ್ಲಿ ________?

   ಅ) ಉದ್ಯೋಗ ಚೀಟಿಯಿಂದ ವೆಂಕಟಪ್ಪನ ಹೆಸರನ್ನು ಮಾತ್ರ ಕೈಬಿಡಬೇಕು

   ಆ) ವೆಂಕಟಪ್ಪ ಕುಟುಂಬದ ಉದ್ಯೋಗ ಚೀಟಿಯನ್ನು ರದ್ದುಪಡಿಸಬೇಕು

   ಇ) ವೆಂಕಟಪ್ಪನ ಹೆಸರನ್ನು ಉದ್ಯೋಗ ಚೀಟಿಯಲ್ಲಿ ಮುಂದುವರೆಸಬೇಕು

   ಈ) ಮೇಲಿನ ಯಾವುದು ಅಲ್ಲ

   ಉದ್ಯೋಗ ಚೀಟಿಯಿಂದ ವೆಂಕಟಪ್ಪನ ಹೆಸರನ್ನು ಮಾತ್ರ ಕೈಬಿಡಬೇಕು

   ಉದ್ಯೋಗ ಚೀಟಿಯಲ್ಲಿ ನೋಂದಾಣಿಯಾದ ನಂತರ ಪ್ರತಿ ವರ್ಷ ಉದ್ಯೋಗ ಚೀಟಿಯನ್ನು ಪರಿಶೀಲನೆ ಮಾಡತಕ್ಕದ್ದು. ಈ ವೇಳೆ ಕುಟುಂಬದ ನೋಂದಾಯಿತ ಸದಸ್ಯರಲ್ಲಿ ಯಾರಾದರೂ ಮರಣ ಹೊಂದಿದ್ದರೆ, ಮದುವೆಯಾಗಿ ಬೇರೆ ಎಡೆ ಹೋಗಿದ್ದರೆ ಅಥವಾ ಸರ್ಕಾರಿ ನೌಕರಿಗೆ ಸೇರ್ಪಡೆಗೊಂಡಿದ್ದರೆ ಅವರ ಹೆಸರನ್ನು ಮಾತ್ರ ರದ್ದುಪಡಿಸಬೇಕು. ಇದೇ ವೇಳೆ ಬಿಟ್ಟು ಹೋಗಿರುವ ಅರ್ಹ ವಯಸ್ಕ ವ್ಯಕ್ತಿಯ ಹೆಸರನ್ನು ಸಹ ಸೇರ್ಪಡೆಗೊಳಿಸಬಹುದು. ಒಂದು ವೇಳೆ ಕುಟುಂಬವು ಬೇರೆಡೆ ವಲಸೆ ಹೋದಾಗ ಉದ್ಯೋಗ ಚೀಟಿಯನ್ನು ರದ್ದುಪಡಿಸುವುದು.

www.karunaduexams.com

3. ಉದ್ಯೋಗ ಖಾತರಿ ಯೋಜನೆಯಡಿ ಕೆಲಸಕ್ಕಾಗಿ ಅರ್ಜಿ ಸಲ್ಲಿಸಿದ ಕುಟುಂಬಕ್ಕೆ ಎಷ್ಟು ದಿನಗಳ ಒಳಗೆ ಉದ್ಯೋಗವನ್ನು ನೀಡಬೇಕು?

ಅ) 10

ಆ) 14

ಇ) 15

ಈ) 21

15

ಕೆಲಸಕ್ಕಾಗಿ ಬೇಡಿಕೆ ಸಲ್ಲಿಸಿದ ದಿನಾಂಕದಿಂದ 15 ದಿನದೊಳಗೆ ಕೆಲಸವನ್ನು/ಉದ್ಯೋಗವನ್ನು ಅರ್ಹಿದಾರರಿಗೆ ನೀಡತಕ್ಕದ್ದು.

4. ಬರಪೀಡಿತ ಅಥವಾ ನೈಸರ್ಗಿಕ ವಿಕೋಪಕ್ಕೆ ತುತ್ತಾದ ಪ್ರದೇಶಗಳಲ್ಲಿ ನರೇಗಾ ಯೋಜನೆಯಡಿ ಸೀಮಿತ ದಿನಗಳಿಂತ ಹೆಚ್ಚುವರಿಯಾಗಿ ಅಕುಶಲ ಮಾನವ ದಿನಗಳನ್ನು ಯಾರ ತೀರ್ಮಾನದ ಮೇಲೆ ನೀಡಬಹುದಾಗಿದೆ?

ಅ) ರಾಜ್ಯಸರ್ಕಾರ

ಆ) ಕೇಂದ್ರ ಸರ್ಕಾರ

ಇ) ಜಿಲ್ಲಾ ಪಂಚಾಯತಿ

ಈ) ಗ್ರಾಮ ಸಭೆ

ಕೇಂದ್ರ ಸರ್ಕಾರ

ನರೇಗಾ ಅಧಿನಿಯಮ 3(4) ಅಡಿಯಲ್ಲಿ ಅವಕಾಶ ಕಲ್ಪಿಸಿರುವಂತೆ, ಬರಪೀಡಿತ ಅಥವಾ ನೈಸರ್ಗಿಕ ವಿಕೋಪಗಳಿಗೆ ತುತ್ತಾದಂತಹ ಗ್ರಾಮೀಣ ಪ್ರದೇಶಗಳಲ್ಲಿ ಆ ಆರ್ಥಿಕ ವರ್ಷಕ್ಕೆ ಸೀಮಿತಗೊಂಡಿರುವ 100 ದಿನಗಳಿಗಿಂತ ಹೆಚ್ಚುವರಿಯಾಗಿ 50 ದಿನಗಳ ಅಕುಶಲ ಮಾನವ ದಿನಗಳ ಕೆಲಸವನ್ನು ಕೇಂದ್ರ ಸರ್ಕಾರವು ತೀರ್ಮಾನಿಸಿ ಅಧಿಸೂಚಿಸಿದಲ್ಲಿ ನೀಡಬಹುದಾಗಿರುತ್ತದೆ.

www.karunaduexams.com

5. ನರೇಗಾ ಯೋಜನೆಯಡಿ "ರೋಜಾಗಾರ್ ದಿವಸ್"ಗೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಗಮನಿಸಿ:

I) ರೋಜಾಗಾರ್ ದಿವಸವನ್ನು ಪ್ರತಿ ತಿಂಗಳು ಆಯೋಜಿಸಬೇಕು

II) ಗ್ರಾಮ ಪಂಚಾಯತಿ ವಾರ್ಡ್ ಮಟ್ಟದಲ್ಲಿ ರೋಜ್ಗಾರ್ ದಿವಸ್ ಅನ್ನು ಆಚರಿಸತಕ್ಕದ್ದು

III) ನರೇಗಾ ಬಗ್ಗೆ ಅರಿವು ಮೂಡಿಸಲು ಹಾಗೂ ಕುಂದುಕೊರತೆಗಳನ್ನು ನಿವಾರಿಸುವುದು ಇದರ ಉದ್ದೇಶ

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II

ಆ) II & III

ಇ) I & III

ಈ) I, II & III

I, II & III

ಮೇಲಿನ ಮೂರು ಹೇಳಿಕೆ ಸರಿಯಿದೆ. ರೋಜಾಗಾರ್ ದಿವಸವನ್ನು ನರೇಗಾ ಯೋಜನೆಯ ಬೇಡಿಕೆಯನ್ನು ನೋಂದಾಯಿಸಿಕೊಳ್ಳಲು ಮತ್ತು ಕುಂದುಕೊರತೆಯನ್ನು ನಿವಾರಿಸಲು ವಾರ್ಡ್ ಮಟ್ಟದಲ್ಲಿ ಪ್ರತಿ ತಿಂಗಳು ಆಯೋಜಿಸಬೇಕು. ರೋಜಾಗಾರ್ ದಿವಸವನ್ನು ಆಚರಿಸುವ ದಿನಾಂಕವನ್ನು ಜಿಲ್ಲಾ ಪಂಚಾಯತಿ ಸಿಇಓ ರವರು ನಿಗದಿಪಡಿಸಿ ಪಂಚಾಯತಿಗಳಿಗೆ ಸಲ್ಲಿಸಬೇಕು.

6. ಸುಶೀಲಮ್ಮನಿಗೆ ಪ್ರಧಾನ ಮಂತ್ರಿ ಆವಾಸ್ ಯೋಜನೆಯಡಿ ಮನೆ ಮಂಜೂರಾಗಿದ್ದು, ಮನೆ ನಿರ್ಮಿಸಿಕೊಳ್ಳುವ ವೇಳೆ ಆಕೆ ನರೇಗಾ ಯೋಜನೆಯಡಿ ಎಷ್ಟು ಮಾನವ ದಿನಗಳನ್ನು ಉಪಯೋಗಿಸಿಕೊಳ್ಳಬಹುದಾಗಿದೆ?

ಅ) 50

ಆ) 45

ಇ) 90

ಈ) 100

90

ವಸತಿ ಯೋಜನೆಯ ಫಲಾನುಭವಿಗಳಿಗೆ ನರೇಗಾ ಯೋಜನೆಯಡಿ 90 ಮಾನವ ದಿನಗಳ ಕೆಲಸವನ್ನು ನೀಡಬಹುದಾಗಿದೆ. ಫಲಾನುಭವಿಗಳು ತಮ್ಮ ಮನೆ ಕೆಲಸವನ್ನು ತಾವೇ ಮಾಡಿಕೊಂಡು (90*224=20160) 20160 ರೂಪಾಯಿಯನ್ನು ಹೆಚ್ಚುವರಿಯಾಗಿ ಪಡೆದುಕೊಳ್ಳಬಹುದು.

www.karunaduexams.com

7. ನರೇಗಾ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿದವರಿಗೆ, ಅಪರಾಧ ನಿರ್ಣಯ ನಂತರ ______ ರೂ ವಿಸ್ತರಿಸಬಹುದಾದ ಶಿಕ್ಷೆಯನ್ನು ನೀಡಬಹುದು?

ಅ) ರೂ 500

ಆ) ರೂ 1000

ಇ) ರೂ 1500

ಈ) ರೂ 2000

ರೂ 1000

ನರೇಗಾ ಅಧಿನಿಯಮ-2005ರ ಪ್ರಕರಣ 25ರ ಪ್ರಕಾರ ನರೇಗಾ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿದವರಿಗೆ, ಅಪರಾಧ ನಿರ್ಣಯ ನಂತರ 1000ರೂ ವಿಸ್ತರಿಸಬಹುದಾದ ಶಿಕ್ಷೆಯನ್ನು ನೀಡಬಹುದು.

8. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಗೆ ಯಾವ ವರ್ಷದಲ್ಲಿ ಮಹಾತ್ಮ ಗಾಂಧಿ ಎಂಬ ಪದವನ್ನು ಜೋಡಿಸಲಾಯಿತು?

ಅ) 2008

ಆ) 2009

ಇ) 2010

ಈ) 2011

2009

ಉದ್ಯೋಗ ಖಾತರಿ ಯೋಜನೆಯು ಮಹಾತ್ಮ ಗಾಂಧಿಯವರ ಗ್ರಾಮ ಸ್ವರಾಜ್ ಪರಿಕಲ್ಪನೆಯ ಅಂಶಗಳನ್ನು ಒಳಗೊಂಡಿದ್ದರಿಂದ 2009 ರಲ್ಲಿ ಮಾನ್ಯ ಪ್ರಧಾನ ಮಂತ್ರಿಗಳು ಕಾಯ್ದೆಯ ಶೀರ್ಷಿಕೆಗೆ "ಮಹಾತ್ಮ ಗಾಂಧಿ" ಪದವನ್ನು ಜೋಡಿಸಿ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ-2005 ಎಂದು ಪುನರ್ ನಾಮಕರಣ ಮಾಡಿ ಘೋಷಿಸಿದರು.

9. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ಗ್ರಾಮೀಣ ಕುಟುಂಬಗಳಿಗೆ ಅಕುಶಲ ಕೆಲಸ ನೀಡುವುದು

II) ದೀರ್ಘಕಾಲೀನ ಸುಸ್ಥಿರ ಆಸ್ತಿಗಳನ್ನು ಸೃಜಿಸುವುದು

III) ಸಾಮಾಜಿಕ ಭದ್ರತೆಯನ್ನು ಒದಗಿಸುವುದು

ಮೇಲಿನ ಯಾವುವು ಎಂ.ಜಿ.ಎನ್.ಆರ್.ಇ.ಜಿ.ಎ ಯೋಜನೆಯ ಉದ್ದೇಶವಾಗಿದೆ?

ಅ) I & II

ಆ) II & III

ಇ) I & III



www.karunaduexams.com

ಈ) I, II & III

I, II & III

ಮೇಲಿನ ಎಲ್ಲವೂ ಸರಿ

10. ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ______?

ಅ) ಕೇಂದ್ರ ಸರ್ಕಾರ ಪುರಸ್ಕೃತ ಯೋಜನೆ

ಆ) ಭಾರತ ಸಂಸತ್ತಿನಿಂದ ಜಾರಿಗೆ ಬಂದಿರುವ ಕಾಯಿದೆ

ಇ) ಕೇಂದ್ರ-ರಾಜ್ಯ ಸರ್ಕಾರ ಪ್ರಾಯೋಜಿತ ಯೋಜನೆ

ಈ) ಕೇಂದ್ರ ಸರ್ಕಾರ ಪ್ರಾಯೋಜಿತ ಯೋಜನೆ

ಭಾರತ ಸಂಸತ್ತಿನಿಂದ ಜಾರಿಗೆ ಬಂದಿರುವ ಕಾಯಿದೆ

ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆ ಭಾರತ ಸಂಸತ್ತಿನಿಂದ ಜಾರಿಗೆ ಬಂದಿರುವ ಕಾಯಿದೆ.

11. ರಮಾಕಾಂತ್ ಮತ್ತು ಉಮಾದೇವಿ ದಂಪತಿಯು ನರೇಗಾ ಯೋಜನೆಯಡಿ ನೋಂದಾಯಿಸಿಕೊಳ್ಳಲು ಬಯಸಿದ್ದಾರೆ. ಈ ದಂಪತಿ ಈ ಕೆಳಗಿನ ಯಾವ ಅವಧಿಯಲ್ಲಿ ಯೋಜನೆಗೆ ನೋಂದಾಯಿಸಿಕೊಳ್ಳತಕ್ಕದ್ದು?

ಅ) ಏಪ್ರಿಲ್-ಮೇ

ಆ) ಮೇ-ಜುಲೈ

ಇ) ಜನವರಿ-ಮಾರ್ಚ್

ಈ) ಯಾವುದೇ ಅವಧಿಯಲ್ಲಾದರು

ಯಾವುದೇ ಅವಧಿಯಲ್ಲಾದರು

ನರೇಗಾ ಯೋಜನೆಯಡಿ ನೋಂದಾಯಿಸಿಕೊಳ್ಳಲು ಯಾವುದೇ ಕಾಲಮಿತಿ ಇಲ್ಲ.

12. ನರೇಗಾ ಯೋಜನೆಯಡಿ ಕಾಮಗಾರಿಯ ಕಾರಣ ಕಾರ್ಮಿಕರು ಶಾಶ್ವತವಾಗಿ ಅಂಗವಿಕಲರಾದರೆ ಅಥವಾ ಮೃತಪಟ್ಟರೆ ____ ರೂ ಅಥವಾ ಕೇಂದ್ರ ಸರ್ಕಾರ ನಿಗದಿಪಡಿಸಬಹುದಾದ ಪರಿಹಾರವನ್ನು ನೀಡಲಾಗುತ್ತದೆ?

ಅ) 20,000

ಆ) 25,000

ಇ) 30,000

ಈ) 50,000

25,000

www.karunaduexams.com

ನರೇಗಾ ಯೋಜನೆಯಡಿ ಕಾಮಗಾರಿಯ ಕಾರಣ ಕಾರ್ಮಿಕರು ಶಾಶ್ವತವಾಗಿ ಅಂಗವಿಕಲರಾದರೆ ಅಥವಾ ಮೃತಪಟ್ಟರೆ 25000 ರೂ ಅಥವಾ ಕೇಂದ್ರ ಸರ್ಕಾರ ನಿಗದಿಪಡಿಸಬಹುದಾದ ಪರಿಹಾರವನ್ನುನೀಡಲಾಗುವುದು.

13. ಈ ಕೆಳಗಿನ ಯಾವ ಸಂದರ್ಭದಲ್ಲಿ ನರೇಗಾ ಯೋಜನೆಯಡಿ ನಿರುದ್ಯೋಗ ಭತ್ಯೆ ಪಡೆಯಲು ಅರ್ಹರಾಗಿರುವುದಿಲ್ಲ?

ಅ) ಅರ್ಜಿದಾರರಿಗೆ ಕೆಲಸಕ್ಕೆ ವರದಿ ಮಾಡಿಕೊಳ್ಳುವಂತೆ ಸೂಚಿಸಿದ್ದರು ವರದಿ ಮಾಡಿಕೊಳ್ಳದೇ ಇದ್ದಾಗ.

ಆ) ಅರ್ಜಿದಾರರು ಕೋರಿದ ಅವಧಿ ಮುಕ್ತಾಯಗೊಂಡಿದ್ದು,ಕೆಲಸಕ್ಕೆ ಹಾಜರಾಗದೇ ಇದ್ದಾಗ

ಇ) ಆರ್ಥಿಕ ವರ್ಷದಲ್ಲಿ ನೂರು ದಿನಗಳಿಗೆ ಸಮನಾದ ಉದ್ಯೋಗವನ್ನು ಈಗಾಗಲೇ ಪಡೆದಿದ್ದಾಗ

ಈ) ಮೇಲಿನ ಎಲ್ಲವೂ

ಮೇಲಿನ ಎಲ್ಲವೂ

14. ನರೇಗಾ ಯೋಜನೆಗೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆಯನ್ನು ಗುರುತಿಸಿ:

ಅ) ಯೋಜನೆಯಡಿ ಕೂಲಿ ಕಾರ್ಮಿಕರಿಗೆ ಕನಿಷ್ಠ 15 ದಿನಕ್ಕೊಮ್ಮೆ ಕೂಲಿ ಪಾವತಿಸಬೇಕು

ಆ) ಮಹಿಳೆಯರಿಗೆ ಮತ್ತು ಪುರುಷರಿಗೆ ಸಮಾನ ವೇತನವನ್ನು ನೀಡತಕ್ಕದ್ದು

ಇ) ಗುತ್ತಿಗೆ ಆಧರಿತ ಕೆಲಸಗಳನ್ನು ಶೇ 20 ರಷ್ಟು ಮಾತ್ರ ನಿರ್ವಹಿಸತಕ್ಕದ್ದು

ಈ) ಬೇಡಿಕೆ ಆಧಾರದ ಮೇಲೆ ಮಾತ್ರ ಕಾಮಗಾರಿಗಳನ್ನು ನಿರ್ವಹಿಸತಕ್ಕದ್ದು

ಗುತ್ತಿಗೆ ಆಧರಿತ ಕೆಲಸಗಳನ್ನು ಶೇ 20 ರಷ್ಟು ಮಾತ್ರ ನಿರ್ವಹಿಸತಕ್ಕದ್ದು

ನರೇಗಾ ಯೋಜನೆ ಸಂಪೂರ್ಣವಾಗಿ ಬೇಡಿಕೆ ಆಧರಿತ ಯೋಜನೆ. ಅಂದರೆ ಕೆಲಸಕ್ಕಾಗಿ ಕೂಲಿ ಕಾರ್ಮಿಕರು ಅರ್ಜಿ ಸಲ್ಲಿಸಿದರೆ ಮಾತ್ರ ಕಾಮಗಾರಿಯನ್ನು ಪ್ರಾರಂಭಿಸಬೇಕು. ಈ ಯೋಜನೆಯಡಿ ಯಾವುದೇ ರೀತಿಯಲ್ಲೂ ಗುತ್ತಿಗೆದಾರರು ಕಾಮಗಾರಿಯನ್ನು ಮಾಡುವಂತಿಲ್ಲ.

15. ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಅಕುಶಲ ಕಾರ್ಮಿಕರ ಕೂಲಿಯನ್ನು ಕಡ್ಡಾಯವಾಗಿ _________ ವ್ಯವಸ್ಥೆ ಮೂಲಕ ಮಾಡುವುದು.

ಅ) NEFT

ಆ) RTGS

ಇ) e-FMS

ಈ) Cheque

e-FMS

www.karunaduexams.com

e-FMS ಎಂದರೆ ಎಲೆಕ್ಟ್ರಾನಿಕ್ ಫಂಡ್ ಮ್ಯಾನೇಜ್ಮೆಂಟ್ ಸಿಸ್ಟಂ. ಪ್ರಸ್ತುತ ನರೇಗಾ ಯೋಜನೆಯಡಿ ಕೂಲಿಗಾರರ ಖಾತೆಗೆ ಹಣವನ್ನು ಇ-ಎಫ್ಎಂಎಸ್ ಮೂಲಕ ಜಮೆ ಮಾಡಲಾಗುತ್ತದೆ.

16. ನರೇಗಾ ಯೋಜನೆಯಡಿ ಬಳಕೆಯಲ್ಲಿರುವ NMRನ ವಿಸ್ತೃತ ರೂಪ _______?

ಅ) National Muster Roll

ಆ) Nominal Muster Roll

ಇ) Net Muster Roll

ಈ)Nrega Muster Roll

Nominal Muster Roll

17. ನರೇಗಾ ಯೋಜನೆಯಡಿ ಕೂಲಿ ವಿಳಂಬ ಪಾವತಿಗೆ ಪಾವತಿಸಬೇಕಾದ ಒಟ್ಟು ಮೊತ್ತಕ್ಕೆ ಶೇ _____ ರಂತೆ ಪರಿಹಾರವನ್ನು ಪ್ರತಿ ದಿನಕ್ಕೆ ನೀಡಬೇಕು?

ಅ) 0.05

ಆ) 0.20

ಇ) 0.50

ಈ) 1.0

0.05

ವಿಳಂಬ ವೇತನ ಪಾವತಿ ಹಾಗೂ ನಿರುದ್ಯೋಗ ಭತ್ಯೆ ಎರಡು ವಿಭಿನ್ನವಾಗಿವೆ. ವಿಳಂಬ ವೇತನ ಪಾವತಿ (Delayed Payment Compensation) ಎಂದರೆ ನರೇಗಾ ಯೋಜನೆಯಡಿ ಕೆಲಸ ನೀಡಿದ 15 ದಿನದೊಳಗೆ ಕೂಲಿ ಕಾರ್ಮಿಕರಿಗೆ ವೇತನ ಪಾವತಿ ಮಾಡಬೇಕು. ಒಂದು ವೇಳೆ 15 ದಿನದೊಳಗೆ ಪಾವತಿ ಮಾಡದಿದ್ದರೆ ಅದನ್ನು ವಿಳಂಬ ವೇತನ ಪಾವತಿ ಎಂದು ಪರಿಗಣಿಸಲಾಗುವುದು ಹಾಗೂ ವಿಳಂಬ ವೇತನ ಪಾವತಿಗೆ ಕಾರಣರಾದವರಿಂದ ಒಟ್ಟು ಮೊತ್ತದ ಶೇ 0.05% ಪ್ರತಿದಿನಕ್ಕೆ (16ನೇ ದಿನದಿಂದ ಪಾವತಿ ಮಾಡುವ ವರೆಗೆ) ವಸೂಲಿ ಮಾಡಲಾಗುವುದು. ನಿರುದ್ಯೋಗ ಭತ್ಯೆ ಎಂದರೆ ಕೂಲಿದಾರರು ಕೆಲಸಕ್ಕೆ ಅರ್ಜಿ ನೀಡಿ 15 ದಿನ ಕಳೆದರೂ ಗ್ರಾಮ ಪಂಚಾಯತಿ ಕೆಲಸ ನೀಡದೆ ಇದ್ದಾಗ ನೀಡಬೇಕಾಗುತ್ತದೆ.

18. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ-2005 ರ ಯಾವ ಸೆಕ್ಷನ್ ಪ್ರಕಾರ ನಿರುದ್ಯೋಗ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ?

ಅ) ಸೆಕ್ಷನ್ 5 (1)

ಆ) ಸೆಕ್ಷನ್ 7 (1)

ಇ) ಸೆಕ್ಷನ್ 8

www.karunaduexams.com

ಈ) ಸೆಕ್ಷನ್ 8 (2)

ಸೆಕ್ಷನ್ 7 (1)

ನರೇಗಾ ಅಧಿನಿಯಮ ಸೆಕ್ಷನ್ 7 (1) ಪ್ರಕಾರ ಯಾವುದೇ ಒಬ್ಬ ಅರ್ಜಿದಾರನಿಂದ ಕೆಲಸಕ್ಕಾಗಿ ಅರ್ಜಿ ಪಡೆದ ಮೇಲೆ 15 ದಿನದೊಳಗೆ ಕೆಲಸವನ್ನು ನೀಡತಕ್ಕದ್ದು. ಉದ್ಯೋಗವನ್ನು ಒದಗಿಸಲಾಗದೆ ಹೋದರೆ ಅಂಥವರು ದಿನಂಪ್ರತಿ ನಿರುದ್ಯೋಗ ಭತ್ಯೆ ಪಡೆಯಲು ಅರ್ಹರಾಗಿರುತ್ತಾರೆ. ನಿರುದ್ಯೋಗ ಭತ್ಯೆಯು ಮೊದಲ 30 ದಿನಗಳ ಕೂಲಿ ದರದ ನಾಲ್ಕನೇ ಒಂದರಷ್ಟು ಮತ್ತು ಉಳಿದ ಹಣಕಾಸು ವರ್ಷದ ಅವಧಿಗೆ ಕೂಲಿ ದರದ ಅರ್ಧಕ್ಕೆ ಕಡಿಮೆ ಇಲ್ಲದಷ್ಟು ಇರಬೇಕಾಗುತ್ತದೆ.

19. ನರೇಗಾ ಯೋಜನೆಯಡಿ ನೀಡಲಾಗುವ ಉದ್ಯೋಗ ಚೀಟಿಗಳು ________?

ಅ) ಕೂಲಿ ಕಾರ್ಮಿಕರ ಬಳಿ ಇರತಕ್ಕದ್ದು

ಆ) ಗ್ರಾಮ ಪಂಚಾಯತಿ ಬಳಿ ಇದ್ದು ಅವಶ್ಯವಿದ್ದಾಗ ಮಾತ್ರ ಕೂಲಿ ಕಾರ್ಮಿಕರಿಗೆ ನೀಡುವುದು

ಇ) ಕಾಯಕ ಬಂಧು ಬಳಿ ಇರತಕ್ಕದ್ದು

ಈ) ಗುತ್ತಿಗೆದಾರರ ಬಳಿ ಇರತಕ್ಕದ್ದು

ಕೂಲಿ ಕಾರ್ಮಿಕರ ಬಳಿ ಇರತಕ್ಕದ್ದು

ನರೇಗಾ ಯೋಜನೆಯಡಿ ನೀಡಲಾಗುವ ಉದ್ಯೋಗ ಚೀಟಿಗಳು ಕೂಲಿ ಕಾರ್ಮಿಕರ ಬಳಿಯೇ ಮಾತ್ರ ಇರತಕ್ಕದ್ದು.

20. ನರೇಗಾ ಅಧಿನಿಯಮ-2005 ರ ಯಾವ ಅಧ್ಯಾಯ & ಸೆಕ್ಷನ್ ಪ್ರಕಾರ ಕೇಂದ್ರ ಉದ್ಯೋಗ ಖಾತರಿ ಪರಿಷತ್ ಅನ್ನು ರಚಿಸಬೇಕು?

ಅ) ಅಧ್ಯಾಯ III, ಸೆಕ್ಷನ್ 09

ಆ) ಅಧ್ಯಾಯ IV, ಸೆಕ್ಷನ್ 10 (1)

ಇ) ಅಧ್ಯಾಯ V, ಸೆಕ್ಷನ್ 08

ಈ) ಅಧ್ಯಾಯ III, ಸೆಕ್ಷನ್ 11

ಅಧ್ಯಾಯ IV, ಸೆಕ್ಷನ್ 10 (1)

ನರೇಗಾ ಅಧಿನಿಯಮ-2005 ರ ಅಧ್ಯಾಯ IV, ಸೆಕ್ಷನ್ 10 (1) ಪ್ರಕಾರ ಕೇಂದ್ರ ಉದ್ಯೋಗ ಖಾತರಿ ಪರಿಷತ್ ಅನ್ನು ರಚಿಸಬೇಕು. ಇದರ ಕೇಂದ್ರ ಕಚೇರಿ ನವದೆಹಲಿಯಲ್ಲಿ ಇರತಕ್ಕದ್ದು. ಅದರಂತೆ ಪ್ರಕರಣ 12ರ ಪ್ರಕಾರ ರಾಜ್ಯಗಳಲ್ಲಿ ರಾಜ್ಯ ಉದ್ಯೋಗ ಖಾತರಿ ಪರಿಷತ್ತನ್ನು ರಚಿಸಬೇಕು.

www.karunaduexams.com

21. ಈ ಕೆಳಗಿನವುಗಳನ್ನು ಗಮನಿಸಿ:

I) ಜಿಲ್ಲಾ ಪಂಚಾಯತಿ

II) ತಾಲ್ಲೂಕ ಪಂಚಾಯತಿ

III) ಗ್ರಾಮ ಪಂಚಾಯತಿ

ಈ ಮೇಲಿನವುಗಳಲ್ಲಿ ನರೇಗಾ ಯೋಜನೆಯ ಯೋಜನಾ ಮತ್ತು ಅನುಷ್ಠಾನ ಪ್ರಾಧಿಕಾರಿಗಳು ಯಾವುವು?

ಅ) I & II

ಆ) II & III

ಇ) I & III

ಈ)I, II & III

I, II & III

ನರೇಗಾ ಅಧಿನಿಯಮ-2005 ರ ಪ್ರಕಾರ ಜಿಲ್ಲೆಯಲ್ಲಿ ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ ಮತ್ತು ಗ್ರಾಮ ಪಂಚಾಯತಿ ಯೋಜನೆಯ ಅನುಷ್ಠಾನ ಪ್ರಾಧಿಕಾರಗಳಾಗಿವೆ.

22. ಈ ಕೆಳಗಿನ ಯಾರು ನರೇಗಾ ಯೋಜನೆಯ ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಗಳಾಗಿರುತ್ತಾರೆ?

ಅ) ಮುಖ್ಯ ಯೋಜನಾಧಿಕಾರಿ

ಆ) ಮುಖ್ಯ ಕಾರ್ಯನಿರ್ವಹಣಾಧಿಕಾರಿ

ಇ) ಉಪ ಕಾರ್ಯದರ್ಶಿ

ಈ) ಅಪಾರ ಜಿಲ್ಲಾಧಿಕಾರಿ

ಮುಖ್ಯ ಕಾರ್ಯನಿರ್ವಹಣಾಧಿಕಾರಿ

ನರೇಗಾ ಅಧಿನಿಯಮದ ಪ್ರಕಾರ ಮುಖ್ಯಕಾರ್ಯನಿರ್ವಹಣಾಧಿಕಾರಿಗಳು, ಜಿಲ್ಲಾಧಿಕಾರಿಗಳು ಅಥವಾ ರಾಜ್ಯ ಸರ್ಕಾರ ನೇಮಿಸಬಹುದಾದ ಅಧಿಕಾರಿಗಳು ನರೇಗಾ ಯೋಜನೆಯ ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಗಳಾಗಿರುತ್ತಾರೆ. ಕರ್ನಾಟಕ ರಾಜ್ಯವು ಮುಖ್ಯಕಾರ್ಯನಿರ್ವಹಣಾಧಿಕಾರಿಗಳನ್ನು ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿಯೆಂದು ಸೂಚಿಸಿದೆ.

www.karunaduexams.com

23. ಜಿಲ್ಲಾ ಕಾರ್ಯಕ್ರಮ ಸಮನ್ವಯ ಅಧಿಕಾರಿ ಯಾವ ತಿಂಗಳಲ್ಲಿ ಜಿಲ್ಲೆಯ ವಾರ್ಷಿಕ ಯೋಜನೆಯನ್ನು ಅನ್ನು ತಯಾರಿಸಬೇಕು?

ಅ) ಅಕ್ಟೋಬರ್

ಆ) ಡಿಸೆಂಬರ್

ಇ) ನವೆಂಬರ್

ಈ) ಜನವರಿ

ಡಿಸೆಂಬರ್

24. ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ-2005 ರ ಯಾವ ಅಧ್ಯಾಯದಡಿ ರಾಷ್ಟ್ರೀಯ ಮತ್ತು ರಾಜ್ಯ ಉದ್ಯೋಗ ಖಾತರಿ ನಿಧಿಯನ್ನು ಸ್ಥಾಪಿಸಬೇಕು?

ಅ) ಅಧ್ಯಾಯ IV

ಆ) ಅಧ್ಯಾಯ V

ಇ) ಅಧ್ಯಾಯ III

ಈ) ಅಧ್ಯಾಯ VI

ಅಧ್ಯಾಯ V

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿನಿಯಮ-2005ರ ಅಧ್ಯಾಯ Vದಡಿ ರಾಷ್ಟ್ರೀಯ ಮತ್ತು ರಾಜ್ಯ ಉದ್ಯೋಗ ಖಾತರಿ ನಿಧಿಯನ್ನು ಸ್ಥಾಪಿಸಬೇಕು. ಈ ಅಧ್ಯಾಯನದ ಪ್ರಕರಣ 21ರಡಿ ರಾಷ್ಟ್ರೀಯ ಉದ್ಯೋಗ ಖಾತರಿ ನಿಧಿಯನ್ನು ಹಾಗೂ ಪ್ರಕರಣ 21ರಡಿ ರಾಜ್ಯ ಉದ್ಯೋಗ ಖಾತರಿ ನಿಧಿಯನ್ನು ರಚಿಸಬೇಕು.

25. ನರೇಗಾ ಅಧಿನಿಯಮ-2005ರ ಯಾವ ಪಕ್ರರಣದಡಿ ಕಾಯಿದೆ ಉಪಬಂಧಗಳಿಗೆ ರೂ 1000 ದಂಡ ವಿಧಿಸುವ ಅವಕಾಶ ಕಲ್ಪಿಸಲಾಗಿದೆ?

ಅ) ಪ್ರಕರಣ 15

ಆ) ಪ್ರಕರಣ 25

ಇ) ಪ್ರಕರಣ 30

ಈ)ಪ್ರಕರಣ 35

ಪ್ರಕರಣ 25

ಪ್ರಕರಣ 25ರಡಿ ನರೇಗಾ ಅಧಿನಿಯಮ-2005ರ ಉಪಬಂಧಗಳನ್ನು ಉಲ್ಲಂಘಿಸಿದರೆ ರೂ 25000 ದಂಡವನ್ನು ವಿಧಿಸಬಹುದು.

www.karunaduexams.com

26. ಮೂಲ ಉದ್ಯೋಗ ಚೀಟಿ ಕಳೆದು ಹೋದಾಗ ಅಥವಾ ಹರಿದು ಹೋದಾಗ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಎಷ್ಟು ದಿನದೊಳಗೆ ಉದ್ಯೋಗ ಚೀಟಿಯನ್ನು ನೀಡಬೇಕು?

ಅ) ಏಳು

ಆ) ಹತ್ತು

ಇ) ಹನ್ನೆರಡು

ಈ) ಹದಿನೈದು

ಏಳು

ಹೊಸದಾಗಿ ಉದ್ಯೋಗ ಚೀಟಿಗಾಗಿ ಅರ್ಜಿ ಸಲ್ಲಿಸಿದಾಗ ಹದಿನೈದು ದಿನದೊಳಗೆ ಚೀಟಿಯನ್ನು ನೀಡಬೇಕು. ಮೂಲ ಉದ್ಯೋಗ ಚೀಟಿ ಕಳೆದು ಹೋದಾಗ ಅಥವಾ ಹರಿದು ಹೋದಾಗ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ ಸಂದರ್ಭದಲ್ಲಿ ಏಳು ದಿನದೊಳಗೆ ನೀಡಬೇಕು.

27. ಈ ಕೆಳಗಿನ ಯಾರು "ಕರ್ನಾಟಕ ರಾಜ್ಯ ಉದ್ಯೋಗ ಖಾತರಿ ಪರಿಷತ್ತಿನ" ಅಧ್ಯಕ್ಷರಾಗಿರುತ್ತಾರೆ?

ಅ) ಮುಖ್ಯಮಂತ್ರಿಗಳು

ಆ) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ಸಚಿವರು

ಇ) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು

ಈ) ನರೇಗಾ ಇಲಾಖೆಯ ಆಯುಕ್ತರು

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ಇಲಾಖೆ ಸಚಿವರು

28. ಈ ಕೆಳಗಿನವುಗಳಲ್ಲಿ ತಪ್ಪಾಗಿ ಹೊಂದಾಣಿಕೆಯಾಗಿರುವುದನ್ನು ಗುರುತಿಸಿ:

ಅ) ನಮೂನೆ 6 ------> ಕೆಲಸಕ್ಕಾಗಿ ಅರ್ಜಿ ಸಲ್ಲಿಸುವುದು

ಆ) ನಮೂನೆ 8 -----> ಕೆಲಸಕ್ಕೆ ವರದಿ ಮಾಡಿಕೊಳ್ಳುವ ನೋಟಿಸು

ಇ) ನಮೂನೆ 9 ------> ಕೆಲಸಕ್ಕೆ ಹಾಜರಾಗಲು ಸಾರ್ವಜನಿಕ ನೋಟಿಸು

ಈ) ನಮೂನೆ 7 -------> ಕುಟುಂಬ ಉದ್ಯೋಗ ಚೀಟಿ ವಿತರಣಾ ವಹಿ

ನಮೂನೆ 7 -------> ಕುಟುಂಬ ಉದ್ಯೋಗ ಚೀಟಿ ವಿತರಣಾ ವಹಿ

ನಮೂನೆ 7 ಉದ್ಯೋಗ ಬೇಡಿಕೆ ವಹಿ.

www.karunaduexams.com

29. ನರೇಗಾ ಯೋಜನೆಯಡಿ ನಿರುದ್ಯೋಗ ಭತ್ಯೆ ಕೋರಿ ಅರ್ಜಿ ಸಲ್ಲಿಸುವವರು ಯಾರಿಗೆ ಮೊದಲು ಅರ್ಜಿಯನ್ನು ಸಲ್ಲಿಸಬೇಕು?

ಅ) ಕಾರ್ಯನಿರ್ವಾಹಣಾಧಿಕಾರಿ

ಆ) ಮುಖ್ಯಕಾರ್ಯನಿರ್ವಹಣಾಧಿಕಾರಿ

ಇ) ಗ್ರಾಮ ಪಂಚಾಯತಿ ಕಾರ್ಯದರ್ಶಿ

ಈ) ಒಂಬುಡ್ಸ್‌ಮನ್

ಗ್ರಾಮ ಪಂಚಾಯತಿ ಕಾರ್ಯದರ್ಶಿ

30. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (NRLM) ಅನ್ನು ಈ ಯಾವ ಯೋಜನೆಯನ್ನು ಪುನರ್ ರಚಿಸಿ ಜಾರಿಗೆ ತರಲಾಗಿದೆ?

ಅ) ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ ಗಾರ್ ಯೋಜನೆ

ಆ) ಸಮಗ್ರ ಗ್ರಾಮೀಣಾಭಿವೃದ್ಧಿ ಕಾರ್ಯಕ್ರಮ

ಇ) ಸಂಪೂರ್ಣ ಗ್ರಾಮೀಣ ರೋಜಾಗಾರ್ ಯೋಜನೆ

ಈ) ಮೇಲಿನ ಯಾವುದು ಅಲ್ಲ

ಸ್ವರ್ಣ ಜಯಂತಿ ಗ್ರಾಮ ಸ್ವರೋಜ್ ಗಾರ್ ಯೋಜನೆ

31. ಕರ್ನಾಟಕದಲ್ಲಿ ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಯಾವ ಹೆಸರಿನಡಿ ಅನುಷ್ಠಾನಗೊಳಿಸಲಾಗುತ್ತಿದೆ?

ಅ) ಸಂಜೀವಿನಿ

ಆ) ಸಾರ್ಥಕ ಜೀವನ

ಇ) ಮಹಿಳಾ ಶಕ್ತಿ

ಈ) ಸಂಘ ಶಕ್ತಿ

ಸಂಜೀವಿನಿ

32. ಸಂಜೀವಿನಿ ಯೋಜನೆಗೆ ಅನುದಾನವನ್ನು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಯಾವ ಅನುಪಾತದಲ್ಲಿ ಭರಿಸುತ್ತವೆ?

ಅ) 60 : 40

ಆ) 75 : 25

ಇ) 65 : 35

ಈ) 55 : 45

75 : 25

www.karunaduexams.com

33. ಅಜೀವಿಕಾ-ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಜಾರಿಗೆ ಬಂದ ದಿನಾಂಕ_____?

ಅ) 13 ಜೂನ್, 2010

ಆ) 3 ಜೂನ್ 2011

ಇ) 20 ಜುಲೈ 2012

ಈ) 15 ಆಗಸ್ಟ್, 2013

3 ಜೂನ್ 2011

34. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ನ ಪ್ರಸ್ತುತ ಹೆಸರು _______?

ಅ) ದೀನ್ ದಯಾಳ್ ಅಂತ್ಯೋದಯ ಯೋಜನೆ

ಆ) ರಾಜೀವ್ ಗಾಂಧಿ ಅಂತ್ಯೋದಯ ಯೋಜನೆ

ಇ) ಅಟಲ್ ಅಂತ್ಯೋದಯ ಯೋಜನೆ

ಈ) ಮೇಲಿನ ಯಾವುದು ಅಲ್ಲ

ದೀನ್ ದಯಾಳ್ ಅಂತ್ಯೋದಯ ಯೋಜನೆ

ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ (NRLM) ಅನ್ನುಕೇಂದ್ರ ಸರ್ಕಾರ ದೀನ್ ದಯಾಳ್ ಅಂತ್ಯೋದಯ ಯೋಜನೆಯೆಂದು ಮರುನಾಮಕರಣ ಮಾಡಿ ಅನುಷ್ಠಾನಗೊಳಿಸಲಾಗುತ್ತಿದೆ.

35. ಈ ಕೆಳಗಿನ ಯಾವ ಸಮಿತಿಯ ಶಿಫಾರಸ್ಸಿನ ಆಧಾರದ ಮೇಲೆ SGSY ಯನ್ನು ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಮಿಷನ್ ಎಂದು ಪುನರ್ ರಚಿಸಲಾಗಿದೆ?

ಅ) ರಾಧಕೃಷ್ಣನ್ ಸಮಿತಿ

ಆ) ಶಿವಶಂಕರ್ ಸಮಿತಿ

ಇ) ಮನೋಹರ್ ಸಿಂಗ್ ಸಮಿತಿ

ಈ) ಶಿವರಾಜ್ ಚೌಹಣ್ ಸಮಿತಿ

ರಾಧಕೃಷ್ಣನ್ ಸಮಿತಿ

36. ಸಂಜೀವಿನಿ ಯೋಜನೆಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

ಅ) ಈ ಯೋಜನೆಯನ್ನು ಸಾರ್ವಜನಿಕ ಮತ್ತು ಖಾಸಗಿ ಸಂಸ್ಥೆಗಳ ಪಾಲುದಾರಿಕೆಯೊಂದಿಗೆ ಅನುಷ್ಠಾನಗೊಳಿಸಲಾಗುತ್ತಿದೆ

ಆ) ಗ್ರಾಮೀಣ ಪ್ರದೇಶದ ಬಡತನ ರೇಖೆಗಿಂತ ಕೆಳಗಿರುವ ಕುಟುಂಬದ 18-35ರ ವಯೋಮಿತಿಯ ಯುವ ಜನತೆಗೆ ಕೌಶಲ್ಯಭಿವೃದ್ಧಿ ತರಭೇತಿ ನೀಡುವುದು ಇದರ ಉದ್ದೇಶ.

ಇ) ಆಯ್ಕೆಯಾಗುವ ಅಭ್ಯರ್ಥಿಗಳಲ್ಲಿ ಶೇ 50% ರಷ್ಟು SC/ST ಇರಬೇಕು

www.karunaduexams.com

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಒಂದು & ಎರಡು ಮಾತ್ರ

ಇ) ಹೇಳಿಕೆ ಒಂದು & ಮೂರು ಮಾತ್ರ

ಈ) ಮೇಲಿನ ಎಲ್ಲವು

ಮೇಲಿನ ಎಲ್ಲವು

37. ಈ ಕೆಳಗಿನ ಯೋಜನೆಗಳನ್ನು ಗಮನಿಸಿ:

I) ಸ್ವಚ್ಛ ಗ್ರಾಮ

II) ಕುಗ್ರಾಮ-ಸುಗ್ರಾಮ

III) ಸುವರ್ಣಗ್ರಾಮ ಯೋಜನೆ

ಮೇಲಿನ ಯೋಜನೆಗಳನ್ನು ಅವುಗಳ ಅನುಷ್ಠಾನ ಮಾಡಿದ ಸರಿಯಾದ ಕಾಲಾನುಕ್ರಮ ಯಾವುದು?

ಅ) I, II & III

ಆ) I, III & II

ಇ) II, III & I

ಈ) II, I & III

I, II & III

ಸ್ವಚ್ಛ ಗ್ರಾಮ ಯೋಜನೆ 2000-01, ಕುಗ್ರಾಮ-ಸುಗ್ರಾಮ 2006ರಲ್ಲಿ ಹಾಗೂ ಸುವರ್ಣ ಗ್ರಾಮ ಯೋಜನೆಯನ್ನು 07-10-2006 ರಿಂದ ಅನುಷ್ಠಾನಗೊಳಿಸಲಾಗುತ್ತಿದೆ.

38. ಗ್ರಾಮ ವಿಕಾಸ ಯೋಜನೆಯಡಿ ಒಂದು ವಿಧಾನ ಸಭಾ ಕ್ಷೇತ್ರದಲ್ಲಿ ಎಷ್ಟು ಗ್ರಾಮಗಳನ್ನು ಅಭಿವೃದ್ಧಿಪಡಿಸಲಾಗುವುದು?

ಅ) ಮೂರು

ಆ) ಎರಡು

ಇ) ಐದು

ಈ) ನಾಲ್ಕು

ಐದು

ಗ್ರಾಮಗಳ ಸಮಗ್ರ ಅಭಿವೃದ್ಧಿಯನ್ನು ಗಮನದಲ್ಲಿಟ್ಟುಕೊಂಡು 2014-15ನೇ ಸಾಲಿನ ಅಯವ್ಯಯದಲ್ಲಿ "ಗ್ರಾಮ ವಿಕಾಸ" ಯೋಜನೆಯನ್ನು ರಾಜ್ಯದ 189 ಗ್ರಾಮೀಣ ವಿಧಾನಸಭಾ

www.karunaduexams.com

ಮತಕ್ಷೇತ್ರಗಳ ವ್ಯಾಪ್ತಿಯಲ್ಲಿ ಪ್ರಾರಂಭಿಸಲು ಘೋಷಿಸಲಾಗಿದೆ. ಅದರಂತೆ "ಗ್ರಾಮ ವಿಕಾಸ" ಯೋಜನೆಯಡಿ ಪ್ರತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡದ ಜನರು ಹೆಚ್ಚು ವಾಸಿಸುವ 2 ಗ್ರಾಮಗಳು ಸೇರಿ ಒಟ್ಟು 5 ಗ್ರಾಮಗಳ ಸರ್ವತೋಮುಖ ಅಭಿವೃದ್ಧಿ ಸಾಧಿಸಲು 3 ವರ್ಷದ ಯೋಜನೆಯನ್ನು ಜಾರಿಗೆ ತರಲಾಗಿದೆ.

39. ಗ್ರಾಮ ವಿಕಾಸ ಯೋಜನೆಯಡಿ ಗ್ರಾಮಗಳ ಅಭಿವೃದ್ಧಿಗೆ ಪ್ರತಿ ಜನಸಂಖ್ಯೆಗೆ ನಿಗದಿಯಾಗಿರುವ ತಲಾನುದಾನ ಎಷ್ಟು?

ಅ) ರೂ 5000

ಆ) ರೂ 7500

ಇ) ರೂ 8000

ಈ) ರೂ 10000

ರೂ 7500

2011ರ ಜನಸಂಖ್ಯೆಯನ್ನು ಆಧರಿಸಿ ಪ್ರತಿ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಕ್ಕೆ ಗರಿಷ್ಠ 5000 ಜನಸಂಖ್ಯೆಯುಳ್ಳ ಗರಿಷ್ಠ 5 ಗ್ರಾಮಗಳಿಗೆ ಗ್ರಾಮದ ಅಭಿವೃದ್ಧಿಗೆ ತಲಾನುದಾನ ರೂ.7,500/- ರಂತೆ ಪ್ರತಿ ಗ್ರಾಮೀಣ ವಿಧಾನಸಭಾ ಮತಕ್ಷೇತ್ರಕ್ಕೆ ಒಟ್ಟು 5000 ಜನಸಂಖ್ಯೆಯುಳ್ಳ ಗರಿಷ್ಠ 5 ಗ್ರಾಮಗಳಿಗೆ ಗರಿಷ್ಟ ರೂ.3.75 ಕೋಟಿಗಳನ್ನು ಹಂಚಿಕೆ ಮಾಡಲಾಗುತ್ತಿದೆ.

40. ಗ್ರಾಮ ವಿಕಾಸ ಯೋಜನೆಯಡಿ ಆಯ್ಕೆಯಾಗುವ ಐದು ಹಳ್ಳಿಗಳ ಪೈಕಿ ಕನಿಷ್ಠ ಎಷ್ಟು SC/ST ಜನಸಂಖ್ಯೆ ಹೊಂದಿರುವ ಹಳ್ಳಿಗಳನ್ನು ಆಯ್ಕೆಮಾಡಬೇಕು?

ಅ) ಎರಡು

ಆ) ಒಂದು

ಇ) ಮೂರು

ಈ) ನಾಲ್ಕು

ಎರಡು

ಪ್ರತಿ ಗ್ರಾಮೀಣ ವಿಧಾನಸಭಾ ಕ್ಷೇತ್ರಕ್ಕೆ ನಿಗದಿಪಡಿಸಿದ ಗರಿಷ್ಠ 5000 ಜನಸಂಖ್ಯೆಯ ಮಿತಿಯೊಳಗೆ ಗರಿಷ್ಠ 5 ಗ್ರಾಮಗಳನ್ನು ಮಾತ್ರ ಆಯ್ಕೆ ಮಾಡುವುದು. ವಿಶೇಷ ಸಂದರ್ಭದಲ್ಲಿ ನಿಗದಿಪಡಿಸಿದ 5000 ಜನಸಂಖ್ಯೆಯನ್ನು ಮೀರಿ ಹೆಚ್ಚು ಜನಸಂಖ್ಯೆ ಇರುವ ಗರಿಷ್ಠ 5 ಗ್ರಾಮಗಳನ್ನು ಆಯ್ಕೆ ಮಾಡಲು ಅವಕಾಶ ಕಲ್ಪಿಸಿದೆ, 5000 ಜನಸಂಖ್ಯೆಯನ್ನು ಮೀರಿದ ಗರಿಷ್ಠ 5 ಗ್ರಾಮಗಳನ್ನು ಆಯ್ಕೆ ಮಾಡುವಾಗಲೂ ಸಹ ಪರಿಶಿಷ್ಠ ಜಾತಿ ಮತ್ತು ಪರಿಶಿಷ್ಠ ಪಂಗಡದ ಜನರು ಹೆಚ್ಚು ವಾಸಿಸುವ ಕನಿಷ್ಟ 2 ಗ್ರಾಮಗಳನ್ನು ಕಡ್ಡಾಯವಾಗಿ ಆಯ್ಕೆ ಮಾಡುವುದು.

www.karunaduexams.com

41. ಗ್ರಾಮ ವಿಕಾಸ ಯೋಜನೆಯ ಉಸ್ತುವಾರಿ ಸಮಿತಿಯ ಅಧ್ಯಕ್ಷರು _______?

ಅ) ಮುಖ್ಯಕಾರ್ಯನಿರ್ವಾಹಣಾಧಿಕಾರಿ

ಆ) ಸಂಬಂಧಿಸಿದ ತಾಲ್ಲೂಕಿನ ಶಾಸಕರು

ಇ) ಜಿಲ್ಲಾ ಪಂಚಾಯತಿ ಅಧ್ಯಕ್ಷರು

ಈ) ಗ್ರಾಮ ಪಂಚಾಯತಿ ಅಧ್ಯಕ್ಷರು

ಸಂಬಂಧಿಸಿದ ತಾಲ್ಲೂಕಿನ ಶಾಸಕರು

42. ಗ್ರಾಮ ವಿಕಾಸ ಯೋಜನೆಯಡಿ ಬಿಡುಗಡೆಯಾಗುವ ಮೊತ್ತದಲ್ಲಿ ಶೇ __ ರಷ್ಟನ್ನು ಗ್ರಾಮದೊಳಗೆ ರಸ್ತೆ, ಚರಂಡಿ ಅಭಿವೃದ್ದಿಪಡಿಸಲು ಬಳಸಬೇಕು?

ಅ) ಶೇ 25

ಆ) ಶೇ 50

ಇ) ಶೇ 35

ಈ) ಶೇ 12

ಶೇ 50

ಗ್ರಾಮದೊಳಗಿನ ಪರಿಸರವನ್ನು ಉತ್ತಮಪಡಿಸಲು ರಸ್ತೆ, ಚರಂಡಿ (ಸ್ಥಳೀಯ ಅವಶ್ಯಕತೆಯನ್ನು ಆಧರಿಸಿ ಸಿಸಿ ರಸ್ತೆ / ಕಲ್ಲು ಚಪ್ಪಡಿ ರಸ್ತೆಗಳನ್ನು ಗ್ರಾಮ ಪಂಚಾಯತ್‌ಗಳು ನಿರ್ಧರಿಸಿದ ಮಾದರಿಯಲ್ಲಿ) (ಶೇ.50). ಗ್ರಂಥಾಲಯ / ಸಾಹಿತಿ ಕಲಾವಿಧರ ಸ್ಮಾರಕ / ಸಭಾಭವನ / ಬಯಲು ರಂಗಮಂದಿರ ನಿರ್ಮಾಣ (ಶೇ 12%). ಯುವಕ/ ಯುವತಿ ಮಂಡಳಿಗಳ ಕ್ರೀಡಾ ಚಟುವಟಿಕೆಗಳ ಅಭಿವೃದ್ಧಿಗಾಗಿ ಜಿಮ್/ ಗರಡಿಮನೆ/ ಫ್ಲಡ್‌ಲೈಟ್ ಆಟದ ಮೈದಾನ/ ದೇಶೀ ಕ್ರೀಡೆ ಅಭಿವೃದ್ಧಿ ಚಟುವಟಿಕೆಗಳಿಗೆ (ಶೇ.12%). ಸೌರ ಬೆಳಕು ದೀಪಗಳ ಅಳವಡಿಕೆ / ಐಇಆ ದೀಪಗಳು (ಶೇ 3%). ತಿಪ್ಪೆ/ತಿಪ್ಪೆಗುಂಡಿಗಳ ವೈಜ್ಞಾನಿಕ ಹಾಗೂ ಆಧುನಿಕ ರೀತಿಯಲ್ಲಿ ಸಂಸ್ಕರಣೆ ಮಾಡುವ ಘಟಕಗಳನ್ನು ನಿರ್ಮಾಣ (ಕೊಪ್ಪಳ ಜಿಲ್ಲೆಯ ಹಿಟ್ನಾಳ ಹಾಗೂ ಗದಗ ಜಿಲ್ಲೆ ಕಣಕಿನ ಕೊಪ್ಪ ಮಾದರಿಯಂತೆ) (ಶೇ 10%). ಗ್ರಾಮ ಪಂಚಾಯತ್ ನಡವಳಿಗಳನ್ನು ಟೆಲಿವಿಷನ್ ಮುಖಾಂತರ ನೇರ ಪ್ರಸಾರದ ಮೂಲ ಸೌಕರ್ಯಕ್ಕೆ (ಶೇ 2%). ಗುಡಿ (ಗ್ರಾಮ ದೇವತೆ)/ ಮಸೀದಿ/ ಚರ್ಚ್‌ಗಳ, ಪುನರುಜ್ಜೀವನ/ಜೀರ್ಣೋದ್ಧಾರ/ಕಟ್ಟಡ ನಿರ್ಮಾಣಕ್ಕಾಗಿ (ಶೇ 6%). ಫ್ಲೆಕ್ಸಿ ಫಂಡ್ (ಶೇ 5%).

43. ಸುವರ್ಣ ಗ್ರಾಮ ಯೋಜನೆ ಜಾರಿಗೆ ಬಂದ ದಿನಾಂಕ ________?

ಅ) 7.10. 2006

ಆ) 10.7. 2007

ಇ) 15.10.2008

www.karunaduexams.com

ಈ) 14.10.2007

7.10. 2006

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಮೂಲಕ ರಾಜ್ಯ ವಲಯ ಯೋಜನೆಯ ಅನುದಾನದಲ್ಲಿ ಸುವರ್ಣ ಗ್ರಾಮೋದಯ ಯೋಜನೆಯನ್ನು ದಿ:7.10.2006ರಂದು ಜಾರಿಗೆ ತರಲಾಗಿತ್ತು. ಸುವರ್ಣ ಗ್ರಾಮೋದಯ ಯೋಜನೆಯು ಕರ್ನಾಟಕ ಸರ್ಕಾರದ ಒಂದು ವಿನೂತನ ಯೋಜನೆಯಾಗಿದ್ದು, ಗ್ರಾಮೀಣಾಭಿವೃದ್ಧಿಯಲ್ಲಿ ಆಳವಾದ ಮತ್ತು ಸಮಗ್ರ ದೂರದೃಷ್ಠಿ ಹೊಂದುವ ಮೂಲಕ 1000 ಗ್ರಾಮಗಳನ್ನು ಸದೃಢವಾಗಿ ಅಭಿವೃದ್ಧಿ ಪಡಿಸುವ ಮತ್ತು ಬುಡಮಟ್ಟದ ಗ್ರಾಮ ಸಮುದಾಯವನ್ನು ಸದೃಢಗೊಳಿಸುವ ಆಶಯವನ್ನು ಹೊಂದಿ ಕಾರ್ಯಕ್ರಮವನ್ನು ರೂಪಿಸಲಾಗಿತ್ತು. ಈ ಯೋಜನೆಯಡಿಯಲ್ಲಿ ಆಯ್ಕೆಯಾದ ಪ್ರತಿ ಗ್ರಾಮದ ಜನಸಂಖ್ಯೆ ಆಧಾರವಾಗಿಟ್ಟುಕೊಂಡು ತಲಾನುದಾನ ರೂ. 2500/-ಗಳಂತೆ 4000 ಜನಸಂಖ್ಯೆ ಹೊಂದಿರುವ ಪ್ರತಿ ಗ್ರಾಮಕ್ಕೆ ರೂ.1.00 ಕೋಟಿಯಂತೆ ಒಟ್ಟು ರೂ.1000 ಕೋಟಿ ಅನುದಾನದಲ್ಲಿ ಈ ಯೋಜನೆಯನ್ನು ಮೊದಲ ಹಂತದಲ್ಲಿ 2006-07ನೇ ಸಾಲಿನಿಂದ ಜಾರಿಗೆ ತರಲಾಗಿದೆ.

44. ಮಹಾತ್ಮಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಎಷ್ಟು ಪ್ರವರ್ಗದಡಿ ಕಾಮಗಾರಿಗಳನ್ನು ತೆಗೆದುಕೊಳ್ಳಬಹುದಾಗಿದೆ?

ಅ) 10

ಆ) 12

ಇ) 16

ಈ) 18

16

45. ನರೇಗಾ ಯೋಜನೆ ಪ್ರಥಮ ಹಂತದಲ್ಲಿ ರಾಜ್ಯದಲ್ಲಿ ಜಾರಿಗೆ ಬಂದ ಜಿಲ್ಲೆಗಳನ್ನು ಗುರುತಿಸಿ:

ಅ) ರಾಯಚೂರು, ಗುಲ್ಬರ್ಗ, ಬೀದರ್, ಚಿತ್ರದುರ್ಗ ಮತ್ತು ದಾವಣೆಗೆರೆ

ಆ) ವಿಜಯಪುರ, ಗುಲ್ಬರ್ಗ, ಬಳ್ಳಾರಿ, ಚಿತ್ರದುರ್ಗ ಮತ್ತು ದಾವಣಗೆರೆ

ಇ) ವಿಜಯಪುರ, ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ ಮತ್ತು ದಾವಣಗೆರೆ

ಈ) ಬೆಳಗಾವಿ, ಚಿಕ್ಕಮಗಳೂರು, ಬಳ್ಳಾರಿ, ಚಿತ್ರದುರ್ಗ ಮತ್ತು ದಾವಣಗೆರೆ

ರಾಯಚೂರು, ಗುಲ್ಬರ್ಗ, ಬೀದರ್, ಚಿತ್ರದುರ್ಗ ಮತ್ತು ದಾವಣೆಗೆರೆ

46. ಈ ಕೆಳಗಿನವುಗಳಲ್ಲಿ ತಪ್ಪಾಗಿ ಹೊಂದಾಣಿಕೆಯಾಗಿರುವುದನ್ನು ಗುರುತಿಸಿ:

ಅ) ನೈರ್ಮಲ್ಯ ಪ್ರಶಸ್ತಿ – ತಾಲ್ಲೂಕು ಮಟ್ಟ

ಆ) ರಜತ ನೈರ್ಮಲ್ಯ – ಜಿಲ್ಲಾ ಮಟ್ಟ

www.karunaduexams.com

ಇ) ಸ್ವರ್ಣ ನೈರ್ಮಲ್ಯ – ವಿಭಾಗೀಯ ಮಟ್ಟ

ಈ) ನೈರ್ಮಲ್ಯ ರತ್ನ -  ಕಂದಾಯ ವಿಭಾಗ

ನೈರ್ಮಲ್ಯ ರತ್ನ -  ಕಂದಾಯ ವಿಭಾಗ

ನೈರ್ಮಲ್ಯ ರತ್ನ- ರಾಜ್ಯ ಮಟ್ಟದಲ್ಲಿ ನೀಡಲಾಗುತ್ತದೆ

47. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ಸ್ವರ್ಣಜಯಂತಿ ಗ್ರಾಮ್ ಸ್ವರೋಜ್ ಗಾರ್ ಯೋಜನೆಯನ್ನು ಪುನರ್ ರಚಿಸಿ ಆಜೀವಿಕ ಯೋಜನೆಯನ್ನು ಜಾರಿಗೆ ತರಲಾಗಿದೆ

II)ಕರ್ನಾಟಕದಲ್ಲಿ ಆಜೀವಿಕ ಯೋಜನೆಯನ್ನು "ಸಂಜೀವಿನಿ" ಹೆಸರಿನಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆ

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಎರಡು ಹೇಳಿಕೆ ಸರಿ

48. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನ (ಆಜೀವಿಕ) ಯೋಜನೆಯನ್ನು ರಾಜ್ಯದಲ್ಲಿ ಮೊದಲ ಹಂತದಲ್ಲಿ ಐದು ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿತ್ತು. ಈ ಕೆಳಗಿನ ಯಾವುದು ಆ ಜಿಲ್ಲೆಯಾಗಿಲ್ಲ?

ಅ) ಬೆಳಗಾವಿ

ಆ) ಧಾರಾವಾಡ

ಇ) ತುಮಕೂರು

ಈ) ರಾಯಚೂರು

ರಾಯಚೂರು

ಸಂಜೀವಿನಿ ಯೋಜನೆಯನ್ನು ಐದು ಜಿಲ್ಲೆಯ 20 ತಾಲ್ಲೂಕುಗಳಲ್ಲಿ ಮೊದಲ ಹಂತದಲ್ಲಿ ಅನುಷ್ಠಾನಗೊಳಿಸಲಾಗಿದೆ. ಈ ಐದು ಜಿಲ್ಲೆಗಳೆಂದರೆ ಬೆಳಗಾವಿ, ಧಾರಾವಾಡ, ತುಮಕೂರು, ಮೈಸೂರು ಮತ್ತು ಉತ್ತರಕನ್ನಡ.

www.karunaduexams.com

49. ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವ ಸಲುವಾಗಿ ಗ್ರಾಮ ಪಂಚಾಯತಿಗಳಿಗೆ ವಿಶೇಷ ಅನುದಾನ ನೀಡಲು ಕರ್ನಾಟಕ ರಾಜ್ಯ ಸರ್ಕಾರ ಯಾವ ಯೋಜನೆಯನ್ನು ಜಾರಿಗೆ ತಂದಿದೆ?

ಅ) ಕುಗ್ರಾಮ-ಸುಗ್ರಾಮ

ಆ) ಸುವರ್ಣ ಗ್ರಾಮೋದಯ

ಇ) ಗ್ರಾಮ ಸ್ವರಾಜ್

ಈ) ಗ್ರಾಮ ವಿಕಾಸ

ಗ್ರಾಮ ಸ್ವರಾಜ್

ಡಾ. ನಂಜುಂಡಪ್ಪ ಸಮಿತಿಯ ವರದಿಯಲ್ಲಿನ ಪ್ರಾದೇಶಿಕ ಅಸಮಾನತೆಯನ್ನು ಹೋಗಲಾಡಿಸುವ ಸಲುವಾಗಿ ಗ್ರಾಮ ಪಂಚಾಯತಿಗಳಿಗೆ ವಿಶೇಷ ಅನುದಾನ ನೀಡಲು ಕರ್ನಾಟಕ ರಾಜ್ಯ ಸರ್ಕಾರ ಗ್ರಾಮ ಸ್ವರಾಜ್ ಯೋಜನೆಯನ್ನು ಅಕ್ಟೋಬರ್ 2006 ರಿಂದ ಜಾರಿಗೊಳಿಸಿದೆ.

50. ಡಾ. ನಂಜುಂಡಪ್ಪ ಸಮಿತಿಯ ವರದಿ ಪ್ರಕಾರ ರಾಜ್ಯದ ಎಷ್ಟು ಜಿಲ್ಲೆ ಹಾಗೂ ತಾಲ್ಲೂಕುಗಳು ಅತ್ಯಂತ ಹಿಂದುಳಿದಿವೆ?

ಅ) 20 ಜಿಲ್ಲೆ, 39 ತಾಲ್ಲೂಕ್

ಆ) 14 ಜಿಲ್ಲೆ, 39 ತಾಲ್ಲೂಕ್

ಇ) 16 ಜಿಲ್ಲೆ, 49 ತಾಲ್ಲೂಕ್

ಈ) 11 ಜಿಲ್ಲೆ, 29 ತಾಲ್ಲೂಕ್

14 ಜಿಲ್ಲೆ, 39 ತಾಲ್ಲೂಕ್

51. ನರೇಗಾಯೋಜನೆಯಡಿಕಾಮಗಾರಿಗಳನ್ನು__________ಯೋಜನೆಯಡಿಯಲ್ಲಿಆಯ್ಕೆಮಾಡ ಬೇಕು.

ಅ) ಜಿಲ್ಲಾಪಂಚಾಯಿತಿಯಸಾಮಾನ್ಯಸಭೆಯಲ್ಲಿ

ಆ) ವಾರ್ಡ ಸಭೆ ಮತ್ತುಗ್ರಾಮಸಭೆ

ಇ) ಗ್ರಾಮಪಂಚಾಯಿತಿ ಸಾಮಾನ್ಯಸಭೆ

ಈ) ತಾಲ್ಲೂಕುಪಂಚಾಯಿತಿ ಸಾಮಾನ್ಯಸಭೆ

ವಾರ್ಡ ಸಭೆ ಮತ್ತುಗ್ರಾಮಸಭೆ

www.karunaduexams.com

52. ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯು _____?

ಅ) ಐದು ವರ್ಷಗಳವರೆಗೆ ಚಾಲ್ತಿಯಲ್ಲಿರುತ್ತದೆ

ಆ) ಕಾಯಿದೆ ಜಾರಿ ಇರುವವರೆ ಚಾಲ್ತಿಯಲ್ಲಿರುತ್ತದೆ

ಇ) ಗ್ರಾಮ ಪಂಚಾಯತಿ ತೀರ್ಮಾನಿಸುವವರೆಗೆ

ಈ) ಜಿಲ್ಲಾ ಪಂಚಾಯತಿ ತೀರ್ಮಾನಿಸುವವರೆಗೆ

ಕಾಯಿದೆ ಜಾರಿ ಇರುವವರೆ ಚಾಲ್ತಿಯಲ್ಲಿರುತ್ತದೆ

53. ಕರ್ನಾಟಕದಲ್ಲಿ ಗ್ರಾಮ ಸ್ವರಾಜ್ ಯೋಜನೆಯನ್ನು ಈ ಕೆಳಗಿನ ಯಾವ ಹಣಕಾಸು ಸಂಸ್ಥೆಯ ನೆರವಿನೊಂದಿಗೆ ಜಾರಿಗೆ ತರಲಾಗಿದೆ?

ಅ) ಭಾರತೀಯ ರಿಸರ್ವ್ ಬ್ಯಾಂಕ್

ಆ) ನಬಾರ್ಡ್

ಇ) ವಿಶ್ವಬ್ಯಾಂಕ್

ಈ) ಏಷ್ಯಾ ಅಭಿವೃದ್ಧಿ ಬ್ಯಾಂಕ್

ವಿಶ್ವಬ್ಯಾಂಕ್

54. ಗ್ರಾಮ ಸ್ವರಾಜ್ ಯೋಜನೆಯಡಿ ಎಷ್ಟು ಗ್ರಾಮ ಪಂಚಾಯತಿಗಳಿಗೆ ಮುಕ್ತ ಅನುದಾನವನ್ನು ಒದಗಿಸಲಾಗಿದೆ?

ಅ) 1343

ಆ) 1458

ಇ) 1134

ಈ) 1020

1343

55. "ನಿರ್ಮಲ ಗ್ರಾಮ ಪುರಸ್ಕಾರ"ಕ್ಕೆ ಸಂಬಂಧಿಸಿದಂತೆ ಈ ಹೇಳಿಕೆಗಳನ್ನು ಗಮನಿಸಿ:

I) ಈ ಪುರಸ್ಕಾರವನ್ನು 2003 ರಲ್ಲಿ ಸ್ಥಾಪಿಸಿದ್ದು, 2005 ರಿಂದ ನೀಡಲಾಗುತ್ತಿದೆ

II) ಪ್ರಶಸ್ತಿಯ ಮೊತ್ತವನ್ನು ಜನಸಂಖ್ಯೆಯ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ

III) ಪ್ರಶಸ್ತಿಯನ್ನು ರಾಷ್ಟ್ರಪತಿಯವರು ನೀಡುತ್ತಾರೆ

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II

ಆ) II & III

ಇ) I & III

www.karunaduexams.com

ಈ) ಮೇಲಿನ ಎಲ್ಲವು

ಮೇಲಿನ ಎಲ್ಲವು

56. ಕರ್ನಾಟಕದಲ್ಲಿ ನಿರ್ಮಲ ಗ್ರಾಮ ಪುರಸ್ಕಾರವನ್ನು ಪಡೆದಿರುವ ಏಕೈಕ ಜಿಲ್ಲೆ ಯಾವುದು?

ಅ) ಬೆಂಗಳೂರು

ಆ) ಬೆಂಗಳೂರು ಗ್ರಾಮಾಂತರ

ಇ) ದಕ್ಷಿಣ ಕನ್ನಡ

ಈ) ಮೈಸೂರು

ದಕ್ಷಿಣ ಕನ್ನಡ

57. ಯಾವುದೇ ಒಂದು ಗ್ರಾಮ ಪಂಚಾಯತಿಯನ್ನು ನಿರ್ಮಲ ಗ್ರಾಮ ಪುರಸ್ಕಾರಕ್ಕೆ ಆಯ್ಕೆ ಮಾಡಬೇಕೆಂದರೆ:

I) ಗ್ರಾಮ ಪಂಚಾಯತಿಯಲ್ಲಿ ಬಯಲು ಶೌಚ ವಿಸರ್ಜನೆ ನಿಷೇಧ ಬಗ್ಗೆ ನಿರ್ಣಯ ಕೈಗೊಂಡಿರಬೇಕು

II) ಗ್ರಾಮ ಪಂಚಾಯತಿಯ ಪ್ರತಿ ಕುಟುಂಬಗಳು ಶೌಚಾಲಯ ಹೊಂದಿದ್ದು, ಬಳಸುತ್ತಿರಬೇಕು

III) ಗ್ರಾಮ ಪಂಚಾಯತಿಯ ಪ್ರತಿ ಶಾಲೆ ಮತ್ತು ಅಂಗನವಾಡಿಗಳು ಶೌಚಾಲಯ ಹೊಂದಿದ್ದು, ಶಾಲೆಗಳಲ್ಲಿ ಬಾಲಕ, ಬಾಲಕಿಯರಿಗೆ ಪ್ರತ್ಯೇಕ ಶೌಚಾಲಯ ಇರಬೇಕು

IV) ಘನ ಮತ್ತು ದ್ರವ ತ್ಯಾಜ್ಯವನ್ನು ಸೂಕ್ತ ರೀತಿಯಲ್ಲಿ ವಿಲೇವಾರಿ ಮಾಡಬೇಕು

ಸರಿಯಾದ ಉತ್ತರವನ್ನು ಕೆಳಗೆ ನೀಡಿರುವ ಕೋಡ್ ಮೂಲಕ ಆರಿಸಿ:

ಅ) I, II & III

ಆ) II, III & IV

ಇ) II & III

ಈ) I, II, III & IV

I, II, III & IV

58. ಸ್ವಚ್ಛ ಭಾರತ ಯೋಜನೆಯಡಿ ಪ್ರತಿ ಶೌಚಾಲಯ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯಾವ ಅನುಪಾತದಲ್ಲಿ ಭರಿಸುತ್ತವೆ?

ಅ) 60 : 40

ಆ) 75 : 25

ಇ) 50 : 50

ಈ) 80 : 20

75 : 25

www.karunaduexams.com

59. ಜಗದೀಶನು ಶೌಚಾಲಯ ನಿರ್ಮಾಣಕ್ಕೆ ಪ್ರೋತ್ಸಾಹ ಧನ ಕೋರಿ ಗ್ರಾಮ ಪಂಚಾಯತಿಗೆ ಅರ್ಜಿ ಸಲ್ಲಿಸಿದ್ದಾನೆ. ಗ್ರಾಮ ಪಂಚಾಯತಿಯು ಆತನಿಗೆ ಪ್ರೋತ್ಸಾಹ ಧನವನ್ನು ನೀಡಬೇಕೆಂದರೆ ___?

ಅ) ಈ ಹಿಂದೆ ಸಹಾಯ ಧನವನ್ನು ಪಡೆದಿರಬಾರದು

ಆ) ಬೇಸ್ ಲೈನ್ ಸಮೀಕ್ಷೆಯಲ್ಲಿ ಆತನ ಹೆಸರಿರತಕ್ಕದ್ದು

ಇ) ಗ್ರಾಮ ಪಂಚಾಯತಿಯಿಂದ ಕಾಮಗಾರಿ ಆದೇಶ ಪಡೆದಿರತಕ್ಕದ್ದು

ಈ) ಮೇಲಿನ ಎಲ್ಲವು

ಮೇಲಿನ ಎಲ್ಲವು

60. ಸ್ವಚ್ಛ ಭಾರತ ಅಭಿಯಾನದಡಿ ಪ್ರೋತ್ಸಾಹ ಧನವನ್ನು ಫಲಾನುಭವಿಗೆ _______?

ಅ) ನಗದು ರೂಪದಲ್ಲಿ ನೀಡತಕ್ಕದ್ದು

ಆ) ಕಂತಿನ ರೂಪದಲ್ಲಿ ನೀಡತಕ್ಕದ್ದು

ಇ) e-FMS ಮೂಲಕ ಖಾತೆಗೆ ವರ್ಗಾಯಿಸುವುದು

ಈ) ಚೆಕ್ ಮೂಲಕ ನೀಡುವುದು

e-FMS ಮೂಲಕ ಖಾತೆಗೆ ವರ್ಗಾಯಿಸುವುದು

61. ಗ್ರಾಮ ಪಂಚಾಯತಿ ತಯಾರಿಸುವ ಕಾಮಗಾರಿಗಳ ಯಾದಿ (Shelf of Project)ಯ ಕೂಲಿ ಮತ್ತು ಸಾಮಾಗ್ರಿಗಳ ವೆಚ್ಚದ ಅನುಪಾತ ________?

ಅ) ಎಲ್ಲಾ ಕಾಮಗಾರಿಗಳ ಒಟ್ಟು ಅಂದಾಜಿನ ವೆಚ್ಚದ ಕೂಲಿ ವೆಚ್ಚ 60ಕ್ಕಿಂತ ಹೆಚ್ಚು ಸಾಮಾಗ್ರಿ ವೆಚ್ಚ 40ಕ್ಕಿಂತ ಕಡಿಮೆ ಇರುವುದು

ಆ) ಪ್ರತಿಯೊಂದುಕಾಮಗಾರಿಯಅಂದಾಜಿನಲ್ಲಿಕೂಲಿವೆಚ್ಚ 60ಕ್ಕಿಂತಹೆಚ್ಚು, ಸಾಮಗ್ರಿವೆಚ್ಚ 40ಕ್ಕಿಂತಕಡಿಮೆಇರಬೇಕು

ಇ) ಜಿಲ್ಲಾಪಂಚಾಯಿತಿ ಸಾಮಾನ್ಯಸಭೆ ಸೂಚಿಸುವಂತೆ ಇರಬೇಕು.

ಈ) ಗ್ರಾಮಪಂಚಾಯಿತಿ ಸಾಮಾನ್ಯಸಭೆ ಸೂಚಿಸುವಂತೆ ಇರಬೇಕು.

ಎಲ್ಲಾ ಕಾಮಗಾರಿಗಳ ಒಟ್ಟು ಅಂದಾಜಿನ ವೆಚ್ಚದ ಕೂಲಿ ವೆಚ್ಚ 60ಕ್ಕಿಂತ ಹೆಚ್ಚು ಸಾಮಾಗ್ರಿ ವೆಚ್ಚ 40ಕ್ಕಿಂತ ಕಡಿಮೆ ಇರುವುದು

www.karunaduexams.com

62. ದೀನ್ ದಯಾಳ್ ಉಪಧ್ಯಾಯ ಗ್ರಾಮ ಜ್ಯೋತಿ ಯೋಜನೆ (ಡಿಡಿಯುಜಿಜೆವೈ)ಯಾವ ದಿನಾಂಕದಿಂದ ಜಾರಿಗೆ ಬಂದಿದೆ?

ಅ) 25ನೇ ಜುಲೈ 2014

ಆ) 25ನೇ ಜೂನ್ 2014

ಇ) 25ನೇ ಜುಲೈ 2015

ಈ) 25ನೇ ಆಗಸ್ಟ 2015

25ನೇ ಜುಲೈ 2015

63. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ಡಿಡಿಯುಜಿಜೆವೈ ಯೋಜನೆಯನ್ನು ರಾಜೀವ್ ಗಾಂಧಿ ಗ್ರಾಮೀಣ ವಿದ್ಯುಕ್ತಿಕರಣ ಯೋಜನೆಯನ್ನು ವಿಲೀನಗೊಳಿಸಿ ಜಾರಿಗೆ ತರಲಾಗಿದೆ

II) ಗುಜರಾತ್ ಸರ್ಕಾರದಲ್ಲಿ ಜಾರಿಯಲ್ಲಿದ್ದ ಯೋಜನೆಯೊಂದರ ಪ್ರೇರೆಪಣೆಯಿಂದ ಈ ಯೋಜನೆಯನ್ನು ಅನುಷ್ಠಾನಗೊಳಿಸಲಾಗಿದೆ

III) ಪ್ರಧಾನಿ ಮೋದಿ ರವರು ಪಾಟ್ನಾದಲ್ಲಿ ಯೋಜನೆಗೆ 25ನೇ ಜುಲೈ, 2015ರಂದು ಚಾಲನೆ ನೀಡಿದರು

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II

ಆ) II & III

ಇ) I & III

ಈ) I, II & III

I, II & III

64. ನರೇಗಾ ಯೋಜನೆಯಡಿ ಕೆಲಸದ ಸ್ಥಳದಲ್ಲಿ ಮಕ್ಕಳನ್ನು ನೋಡಿಕೊಳ್ಳಲು ನೇಮಿಸುವ ಮಹಿಳೆಯು ಉದ್ಯೋಗಕ್ಕಾಗಿ ____?

ಅ) ನೋಂದಣಿ ಮಾಡಿಕೊಳ್ಳುವ ಅಗತ್ಯವಿಲ್ಲ

ಆ) ನೋಂದಣಿ ಮಾಡಿಸಿಕೊಳ್ಳಲೇಬೇಕು

ಇ) ಗ್ರಾಮಪಂಚಾಯಿತಿ ಸದಸ್ಯನ ಶಿಫಾರಸ್ಸು ಪಡೆಯಬೇಕು

ಈ) ಎಂ.ಎಲ್.ಎ .ಯಿಂದ ಶಿಫಾರಸ್ಸು ಪಡೆಯಬೇಕು

ನೋಂದಣಿ ಮಾಡಿಸಿಕೊಳ್ಳಲೇಬೇಕು

www.karunaduexams.com

65. ದೀನ್ ದಯಾಳ್ ಉಪಧ್ಯಾಯ ಗ್ರಾಮ ಜ್ಯೋತಿ ಯೋಜನೆಯ ಉದ್ದೇಶ__________?

ಅ) ಪ್ರತಿ ಹಳ್ಳಿಗಳಿಗೂ 24*7ನಿರಂತರ ವಿದ್ಯುತ್ ಕಲ್ಪಿಸುವುದು

ಆ) ಕೃಷಿ ಮತ್ತು ಗ್ರಾಮೀಣ ಕುಟುಂಬಗಳಿಗೆ ಪ್ರತ್ಯೇಕವಾಗಿ ವಿದ್ಯುತ್ ವ್ಯವಸ್ಥೆ ನೀಡುವುದು

ಇ) ವಿದ್ಯುತ್ ಸರಬರಾಜಿನಲ್ಲಾಗುವ ನಷ್ಟವನ್ನು ತಗ್ಗಿಸುವುದು

ಈ) ಮೇಲಿನ ಎಲ್ಲವು

ಮೇಲಿನ ಎಲ್ಲವು

66. ನರೇಗಾ ಯೋಜನೆಯಡಿ 60:40ರ ಅನುಪಾತ ಎಂದರೆ

ಅ) ಸಾಮಗ್ರಿವೆಚ್ಚ 60ಕ್ಕಿಂತಹೆಚ್ಚು, ಕೂಲಿವೆಚ್ಚ 40ಕ್ಕಿಂತಕಡಿಮೆ.

ಆ) ಸಾಮಗ್ರಿವೆಚ್ಚ 60, ಕೂಲಿವೆಚ್ಚ 40

ಇ) ಕೂಲಿವೆಚ್ಚನಿಖರವಾಗಿ 60, ಸಾಮಗ್ರಿವೆಚ್ಚನಿಖರವಾಗಿ 40

ಈ) ಕೂಲಿವೆಚ್ಚ 60ಕ್ಕಿಂತ ಹೆಚ್ಚು, ಸಾಮಗ್ರಿವೆಚ್ಚ 40ಕ್ಕಿಂತಕಡಿಮೆ

ಕೂಲಿವೆಚ್ಚ 60ಕ್ಕಿಂತಹೆಚ್ಚು, ಸಾಮಗ್ರಿವೆಚ್ಚ 40ಕ್ಕಿಂತಕಡಿಮೆ

67. ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಯೋಜನೆ (ಆಜೀವಿಕಾ)ಯನ್ನು ಏನೆಂದು ಮರುನಾಮಕರಣ ಮಾಡಲಾಗಿದೆ?

ಅ) ದೀನ್ ದಯಾಳ್ ಅಂತ್ಯೋದಯ ಯೋಜನೆ

ಆ) ಅಟಲ್ ಅಂತ್ಯೋದಯ ಯೋಜನೆ

ಇ) ಮದನ್ ಮಾಳವಿಯ ಜೀವನೋಪಾಯ ಯೋಜನೆ

ಈ) ಸುರಭಿ ಗ್ರಾಮೀಣ ಜೀವನೋಪಾಯ ಯೋಜನೆ

ದೀನ್ ದಯಾಳ್ ಅಂತ್ಯೋದಯ ಯೋಜನೆ

68. 14ನೇ ಹಣಕಾಸು ಆಯೋಗದ ಶಿಫಾರಸ್ಸು ಜಾರಿಯಲ್ಲಿರುವ ಅವಧಿ ________?

ಅ) ಏಪ್ರಿಲ್ 1, 2015-2020

ಆ) ಏಪ್ರಿಲ್ 1, 2014- 2019

ಇ) ಏಪ್ರಿಲ್ 1, 2016-2021

ಈ) ಏಪ್ರಿಲ್ 1, 2017-2022

ಏಪ್ರಿಲ್ 1, 2015-2020

www.karunaduexams.com

69. ಮೊದಲ ಬಾರಿಗೆ ಉದ್ಯೋಗ ಚೀಟಿಯನ್ನು (Photo ಸಮೇತ) ಗ್ರಾಮ ಪಂಚಾಯತಿಯು ಕೂಲಿ ಕಾರ್ಮಿಕ ಕುಟುಂಬದಿಂದ ______?

ಅ) ಹಣಪಡೆದು ನೀಡಬೇಕು

ಆ) ಹಣಪಡೆಯದೇ ನೀಡಬೇಕು

ಇ) ಶೇ.10ರಷ್ಟು ಹಣಪಡೆದು ನೀಡಬೇಕು

ಈ) ಶೇ.50ರಷ್ಟು ಹಣಪಡೆದು ನೀಡಬೇಕು

ಹಣಪಡೆಯದೇ ನೀಡಬೇಕು

70. ಈ ಕೆಳಗಿನ ಹೇಳಿಕೆಗಳಲ್ಲಿ ತಪ್ಪಾಗಿರುವುದು ಯಾವುದು?

ಅ) ಕೇಂದ್ರ ಹಣಕಾಸು ಆಯೋಗವನ್ನು ರಾಷ್ಟ್ರಪತಿಗಳು ಸಂವಿಧಾನ 280ನೇ ಪ್ರಕರಣದಡಿ ರಚಿಸುತ್ತಾರೆ

ಆ) ಈ ಹಣಕಾಸು ಆಯೋಗವು ಒಬ್ಬ ಅಧ್ಯಕ್ಷ ಹಾಗೂ ನಾಲ್ಕು ಜನ ಸದಸ್ಯರನ್ನು ಒಳಗೊಂಡಿರುತ್ತದೆ

ಇ) 14ನೇ ಹಣಕಾಸು ಆಯೋಗ ಕೇಂದ್ರ ತೆರಿಗೆ ಆದಾಯದಲ್ಲಿ ರಾಜ್ಯಗಳ ಪಾಲನ್ನು ಶೇ. 42% ಶಿಫಾರಸ್ಸು ಮಾಡಿದೆ.

ಈ) ವಿಜಯ್ ಕೇಳ್ಕರ್ 14ನೇ ಹಣಕಾಸು ಆಯೋಗದ ಅಧ್ಯಕ್ಷರಾಗಿದ್ದಾರೆ

ವಿಜಯ್ ಕೇಳ್ಕರ್ 14ನೇ ಹಣಕಾಸು ಆಯೋಗದ ಅಧ್ಯಕ್ಷರಾಗಿದ್ದಾರೆ

71. ನರೇಗಾ ಯೋಜನೆಯಡಿ ಗ್ರಾಮಪಂಚಾಯತಿಯು ಯೋಜನೆಯ _____ ರಷ್ಟನ್ನಾದರೂ ಸಾಮಾಜಿಕ ಅರಣ್ಯೀಕರಣಕ್ಕೆ ವಿನಿಯೋಗಿಸುವುದು ಕಡ್ಡಾಯವಾಗಿದೆ _____?

ಅ) ಶೇ.100ರಷ್ಟು

ಆ) ಶೇ.50ರಷ್ಟು

ಇ) ಶೇ.20ರಷ್ಟು

ಈ) ಶೇ.10ರಷ್ಟು

ಶೇ.20ರಷ್ಟು

72. ಒಂದುಆರ್ಥಿಕವರ್ಷದಲ್ಲಿ 100 ದಿನಗಳಉದ್ಯೋಗಎಂದರೆ ____:

ಅ) ಒಬ್ಬವ್ಯಕ್ತಿಗೆ

ಆ) ಗಂಡ-ಹೆಂಡತಿಗೆ

ಇ) ಒಂದು ಕುಟುಂಬಕ್ಕೆ

ಈ) ನೋಂದಾಯಿತ ವಯಸ್ಕರ ಒಂದು ಕುಟುಂಬಕ್ಕೆ

ನೋಂದಾಯಿತ ವಯಸ್ಕರ ಒಂದು ಕುಟುಂಬಕ್ಕೆ

www.karunaduexams.com

73. ಒಂದು ಕುಟುಂಬಕ್ಕೆ ______ ಉದ್ಯೋಗ ಚೀಟಿ ವಿತರಿಸಬೇಕು.

ಅ) ವ್ಯಕ್ತಿಗೆ ಒಂದರಂತೆ

ಆ) ಗಂಡ-ಹೆಂಡತಿಗೆ ಪ್ರತ್ಯೇಕ

ಇ) ಒಂದು

ಈ) ಎರಡು

ಒಂದು

74. ತಾಲ್ಲೂಕು ಮಟ್ಟದ ಅಧಿಕಾರಿಗಳು ಯೋಜನೆಯ ಕಾಮಗಾರಿಗಳ _____ನ್ನು ಮೇಲ್ವಿಚಾರಣೆ ಮಾಡಬೇಕು?

ಅ) ಶೇ.10ರಷ್ಟು

ಆ) ಶೇ.2ರಷ್ಟು

ಇ) ಶೇ.50ರಷ್ಟು

ಈ) ಶೇ.100ರಷ್ಟು

ಶೇ.100ರಷ್ಟು

75. ಈ ಕೆಳಗಿನವರುಗಳಲ್ಲಿ 14ನೇ ಹಣಕಾಸು ಆಯೋಗದ ಸದಸ್ಯರಲ್ಲದವರು ಯಾರು?

ಅ) ಗೋವಿಂದ ರಾವ್

ಆ) ಸುದೀಪ್ತೊ ಮುಂಡ್ಲೆ

ಇ) ಅಭಿಜಿತ್ ಸೇನ್

ಈ) ಸಿಂಧೂ ಕಲ್ಲೂರಿ

ಸಿಂಧೂ ಕಲ್ಲೂರಿ

76. ರಾಜೀವ್ ಗಾಂಧಿಚೈತನ್ಯ ಯೋಜನೆಗೆ ಸಂಬಂಧಿಸಿದಂತೆ ಹೇಳಿಕೆಗಳನ್ನು ಗಮನಿಸಿ:

I) ಇದು ಕೇಂದ್ರ ಪುರಸ್ಕೃತ ಯೋಜನೆಯಾಗಿದ್ದು, ಯೋಜನೆಯ ವೆಚ್ಚವನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರ ಭರಿಸುತ್ತವೆ

II) ಯುವ ಜನತೆಯಲ್ಲಿ ಸ್ವಾವಲಂಭನೆ ಮತ್ತು ಸ್ವಉದ್ಯೋಗ ಸೃಷ್ಟಿಸುವುದು ಇದರ ಉದ್ದೇಶ

III) ಯೋಜನೆಯ ಫಲಾನುಭವಿಗಳನ್ನು ಗ್ರಾಮ ಸಭೆಯಲ್ಲಿ ಆಯ್ಕೆಮಾಡುವುದು

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II

ಆ) II & III

ಇ) I & III

www.karunaduexams.com

ಈ) I, II & III

II & II

ಇದು ರಾಜ್ಯ ಸರ್ಕಾರದ ಯೋಜನೆಯ. ಇದರ ಪೂರ್ಣ ವೆಚ್ಚವನ್ನು ರಾಜ್ಯ ಸರ್ಕಾರವೇ ಭರಿಸುತ್ತದೆ.

77. ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಫಲಾನುವಿಗಳಾಗಲು ಇರಬೇಕಾದ ಅರ್ಹತೆಯಲ್ಲಿ ತಪ್ಪಾಗಿರುವುದು?

ಅ) 18-35 ವರ್ಷ ವಯಸ್ಸಿನವರಾಗಿರಬೇಕು

ಆ) ಗ್ರಾಮ ಪಂಚಾಯತಿಯಿಂದ ಯಾವುದೇ ಸಹಾಯ ಪಡೆದಿರಬಾರದು

ಇ) ನಿರುದ್ಯೋಗಿಗಳಾಗಿರಬೇಕು

ಈ) ಕೇವಲ ಯುವಕರಿಗೆ ಮಾತ್ರ

ಕೇವಲ ಯುವಕರಿಗೆ ಮಾತ್ರ

78. ರಾಜೀವ್ ಗಾಂಧಿ ಚೈತನ್ಯ ಯೋಜನೆಯಡಿ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯ ಅಧ್ಯಕ್ಷರು __________?

ಅ) ಜಿಲ್ಲಾ ಪಂಚಾಯತಿ ಅಧ್ಯಕ್ಷರು

ಆ) ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು

ಇ) ಜಿಲ್ಲಾಉಸ್ತುವಾರಿ ಸಚಿವರು

ಈ) ಜಿಲ್ಲಾಧಿಕಾರಿಗಳು

ಜಿಲ್ಲಾ ಉಸ್ತುವಾರಿ ಸಚಿವರು

79. ರಾಜೀವ್ ಗಾಂಧಿಚೈತನ್ಯ ಯೋಜನೆಯಡಿ ಪ್ರತಿ ಗ್ರಾಮ ಪಂಚಾಯತಿ ವರ್ಷದಲ್ಲಿ ಎಷ್ಟು ಫಲಾನುಭವಿಗಳನ್ನು ಆಯ್ಕೆ ಮಾಡತಕ್ಕದ್ದು?

ಅ) 45-55

ಆ) 40-50

ಇ) 35-45

ಈ) 30-40

40-50

www.karunaduexams.com

80. ಕರ್ನಾಟಕ ಮುಖ್ಯಮಂತ್ರಿಗಳ 15 ಅಂಶ ಕಾರ್ಯಕ್ರಮಗಳಡಿ ಎಷ್ಟು ಕಾರ್ಯಕ್ರಮಗಳನ್ನು ನರೇಗಾ ಯೋಜನೆಯಡಿ ತೆಗೆದುಕೊಳ್ಳಬಹುದಾಗಿದೆ?

ಅ) ಐದು

ಆ) ಏಳು

ಇ) ಹತ್ತು

ಈ) ಹನ್ನೆರಡು

ಹತ್ತು

81. ನರೇಗಾ ಯೋಜನೆಯಡಿ ಅಂಗವಿಕಲರು ಮತ್ತು 60 ವರ್ಷ ಮೀರಿದವರು ಯೋಜನೆಯಡಿ ______?

ಅ) ನೋಂದಾಯಿಸುವಂತಿಲ್ಲ

ಆ) ಮೇಲಧಿಕಾರಿಗಳ ಅನುಮತಿ ಮೇರೆ ನೋಂದಾಯಿಸಬಹುದು

ಇ) ಗ್ರಾಮಪಂಚಾಯಿತಿ ಒಪ್ಪಿದರೆ ನೋಂದಾಯಿಸಬಹುದು

ಈ) ನೋಂದಾಯಿಸಬಹುದು

ನೋಂದಾಯಿಸಬಹುದು

82. "ಸಂಜೀವಿನಿ" ಯೋಜನೆಯಡಿ ಸ್ವ-ಸಹಾಯ ಗುಂಪುಗಳಿಗೆ ಶೇ ___ರಷ್ಟು ಬಡ್ಡಿದರದಲ್ಲಿ ಸಾಲವನ್ನು ನೀಡಲಾಗುತ್ತದೆ?

ಅ) ಶೇ 5%

ಆ) ಶೇ 7%

ಇ) ಶೇ 9%

ಈ) ಶೇ 6%

ಶೇ 7%

83. ಈ ಕೆಳಗಿನ ಯಾವ ಸಂಸ್ಥೆ ರಾಜ್ಯದಲ್ಲಿ "ಸಂಜೀವಿನಿ" ಯೋಜನೆಯನ್ನು ಅನುಷ್ಠಾನಗೊಳಿಸುತ್ತಿದೆ?

ಅ) ಕೆ.ಎಸ್.ಆರ್.ಎಲ್.ಪಿ.ಸಿ

ಆ) ಅಬ್ದುಲ್ ನಜೀರ್ ಸಾಬ್ ಸಂಸ್ಥೆ

ಇ) ಕೆ.ಆರ್.ಐ.ಡಿ.ಎಲ್

ಈ) ಮೇಲಿನ ಯಾವುದು ಅಲ್ಲ

ಕೆ.ಎಸ್.ಆರ್.ಎಲ್.ಪಿ.ಸಿ

www.karunaduexams.com

ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧಕ ಸಂಘ (ಕೆ.ಎಸ್.ಆರ್.ಎಲ್.ಪಿ.ಸಿ) ಮೂಲಕ ಅನುಷ್ಠಾನಗೊಳಿಸಲಾಗುತ್ತಿದೆ.

84. ಕೆಳಗಿನ ಯೋಜನೆಗಳನ್ನು ಗಮನಿಸಿ:

I) ತ್ವರಿತ ಗ್ರಾಮೀಣ ನೀರು ಸರಬರಾಜು ಕಾರ್ಯಕ್ರಮ

II) ಸ್ವಜಲಧಾರ

III) ರಾಷ್ಟ್ರೀಯ ಗ್ರಾಮೀಣ ನೀರು ಗುಣಮಟ್ಟ ಮಾನಿಟರಿಂಗ್ ಮತ್ತು ಸರ್ವೆಯಲೆನ್ಸ್

ಈ ಮೇಲಿನ ಯಾವ ಯೋಜನೆಗಳನ್ನು ವಿಲೀನಗೊಳಿಸಿ ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮವನ್ನು ಜಾರಿಗೆ ತರಲಾಗಿದೆ?

ಅ) I & II

ಆ) I & III

ಇ) II & III

ಈ) I, II & III

I, II & III

85. ರಾಷ್ಟ್ರೀಯ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮದ ಉದ್ದೇಶಗಳನ್ನು ಗಮನಿಸಿ:

I) ಪ್ರತಿ ದಿನಕ್ಕೆ ಪ್ರತಿ ವ್ಯಕ್ತಿಗೆ 40 ಲೀಟರ್ ಕುಡಿಯುವ ನೀರನ್ನು ಪೂರೈಸುವುದು

II)ಮರುಭೂಮಿ ಅಭಿವೃದ್ಧಿ ಕಾರ್ಯಕ್ರಮ ಪ್ರದೇಶದಲ್ಲಿ ಜಾನುವಾರುಗಳಿಗೆ ಹೆಚ್ಚುವರಿಯಾಗಿ 30 ಲೀಟರ್ ನೀರನ್ನು ಪೂರೈಸುವುದು

III) ಪ್ರತಿ 250 ಜನರಿಗೆ ಒಂದು ಒತ್ತುವ ಪಂಪನ್ನು ಪೂರೈಸುವುದು

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿವೆ?

ಅ) I & II

ಆ) I & III

ಇ) II & III

ಈ) I, II & III

I, II & III

www.karunaduexams.com

86. ತ್ವರಿತ ಗ್ರಾಮೀಣ ಕುಡಿಯುವ ನೀರು ಕಾರ್ಯಕ್ರಮ (Accelerated Rural Drinking Water Programme) ಯಾವ ವರ್ಷದಿಂದ ಜಾರಿಗೆ ಬಂದಿದೆ?

ಅ) 1970-71

ಆ) 1972-73

ಇ) 1974-75

ಈ) 1980-81

1972-73

87. ಸ್ವಜಲಧಾರ ಯೋಜನೆಯನ್ನು ಜಾರಿಗೊಳಿದ ಪ್ರಧಾನಿ ಮಂತ್ರಿ _______?

ಅ) ಅಟಲ್ ಬಿಹಾರಿ ವಾಜಪೇಯಿ

ಆ) ಪಿ ವಿ ನರಸಿಂಹರಾವ್

ಇ) ಎಚ್ ಡಿ ದೇವೆಗೌಡ

ಈ) ರಾಜೀವ್ ಗಾಂಧಿ

ಅಟಲ್ ಬಿಹಾರಿ ವಾಜಪೇಯಿ

88. ಸ್ವಜಲಧಾರ ಯೋಜನೆಗೆ ಸಂಬಂಧಿಸಿದಂತೆ ಕೆಳಕಂಡ ಹೇಳಿಕೆಗಳನ್ನುಗಮನಿಸಿ:

I) ಈ ಯೋಜನೆಯ ವೆಚ್ಚದಲ್ಲಿ ಶೇ 90% ಕೇಂದ್ರ ಸರ್ಕಾರ ಭರಿಸುವುದು

II) ಇದು ಬೇಡಿಕೆ ಆಧರಿತ ಹಾಗೂ ಸಮುದಾಯ ಮುಂದಾಳತ್ವ ಯೋಜನೆ

III) ಯೋಜನೆಯಡಿ ಸೃಜಿಸಲಾದ ಕುಡಿಯುವ ನೀರಿನ ಆಸ್ತಿಗಳು ಗ್ರಾಮಪಂಚಾಯತ್ ಒಡೆತನದಲ್ಲಿ ಇರತಕ್ಕದ್ದು

ಮೇಲಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳು ಯಾವುವು?

ಅ) I & II

ಆ) II & III

ಇ) I & III

ಈ) I, II & III

I, II & III

www.karunaduexams.com

89. ಗ್ರಾಮ ವಿಕಾಸ ಯೋಜನೆಯನ್ನು ಕರ್ನಾಟಕ ಸರ್ಕಾರ ಯಾವ ವರ್ಷದಿಂದ ಅನುಷ್ಠಾನ ಮಾಡುತ್ತಿದೆ?

ಅ) 2013-14

ಆ) 2014-15

ಇ) 2015-16

ಈ) ಮೇಲಿನ ಯಾವುದು ಅಲ್ಲ

2014-15

90. ನರೇಗಾ ಯೋಜನೆಯಡಿ 5 ಕಿ.ಮೀ ವ್ಯಾಪ್ತಿಯಲ್ಲಿ ಕೆಲಸವನ್ನು ನೀಡಿದ ಸಂರ್ದಭದಲ್ಲಿ ಕೂಲಿ ದರದ ಶೇ _____ ರಷ್ಟನ್ನು ಹೆಚ್ಚುವರಿಯಾಗಿ ನೀಡಬೇಕು?

ಅ) ಶೇ 5%

ಆ) ಶೇ 10%

ಇ) ಶೇ 15%

ಈ) ಶೇ 20%

ಶೇ 10%

91. ಕೂಲಿ ಕಾರ್ಮಿಕನು ಆರಂಭದಲ್ಲಿ ಕೆಲಸ ಕೇಳುವಾಗ ಸತತವಾಗಿ ____ ದಿನಗಳಿಗೆ ಕೋರಬೇಕು?

ಅ) 10

ಆ) 50

ಇ) 14

ಈ) 100

14

92. ಕಾಮಗಾರಿಯ ಕಾರಣದಿಂದಾಗಿ ವೈದ್ಯಕೀತ ಚಿಕಿತ್ಸೆ ಪಡೆಯುತ್ತಿರುವಾಗ ಕಾರ್ಮಿಕನು ಬಯಸಿದರೆ ನಿಗದಿತ ಕೂಲಿಯ ___ನ್ನು ಪಡೆಯಲು ಅವಕಾಶವಿದೆ.

ಅ) ಶೇ.100

ಆ) ಶೇ.50

ಇ) ಶೇ.25

ಈ) ಶೇ.10

ಶೇ 50

www.karunaduexams.com

93. ಪ್ರಸ್ತುತ ನರೇಗಾ ಸಾಫ್ಟ್ ವೇರ್ ನಲ್ಲಿ ಒಂದು NMR ಗೆ ಗರಿಷ್ಟ ಎಷ್ಟು ಜನರಿಗೆ ಹಾಜರಾತಿ ನೀಡಬಹುದಾಗಿದೆ?

ಅ) 12

ಆ) 10

ಇ) 15

ಈ) 20

10

94. ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ನರೇಗಾ ಯೋಜನೆಯ ಸಾಮಾಜಿಕ ಲೆಕ್ಕ ತಪಾಸಣೆಯನ್ನು ಆರು ತಿಂಗಳಿಗೊಮ್ಮೆ ವರ್ಷಕ್ಕೆ ಎರಡು ಬಾರಿ ಮಾಡತಕ್ಕದ್ದು

II) ಸಾಮಾಜಿಕ ಲೆಕ್ಕ ತಪಾಸಣೆ ದಿನಾಂಕವನ್ನು ಜಿಲ್ಲಾ ಪಂಚಾಯತಿ ನಿಗದಿಪಡಿಸುತ್ತದೆ

ಮೇಲಿನ ಯಾವ ಹೇಳಿಕೆ/ಹೇಳಿಕೆಗಳು ಸರಿಯಾಗಿದೆ?

ಅ) ಹೇಳಿಕೆ ಒಂದು ಮಾತ್ರ

ಆ) ಹೇಳಿಕೆ ಎರಡು ಮಾತ್ರ

ಇ) ಎರಡು ಹೇಳಿಕೆ ಸರಿ

ಈ) ಎರಡು ಹೇಳಿಕೆ ತಪ್ಪು

ಎರಡು ಹೇಳಿಕೆ ಸರಿ

95. ಈ ಕೆಳಗಿನ ವಸತಿ ಯೋಜನೆಗಳನ್ನು ಗಮನಿಸಿ:

I) ಪ್ರಧಾನ ಮಂತ್ರಿ ಆವಾಸ್ ಯೋಜನೆ

II) ಡಾ. ಬಿ.ಆರ್. ಅಂಬೇಡ್ಕರ್ ಯೋಜನೆ

III) ಬಸವ ವಸತಿ ಯೋಜನೆ

ಈ ಮೇಲಿನ ಯಾವ ಯೋಜನೆಗಳ ಫಲಾನುಭವಿಗಳು ನರೇಗಾ ಯೋಜನೆಯಡಿ 90 ಮಾನವ ದಿನಗಳನ್ನು ಪಡೆಯಲು ಅರ್ಹರಾಗಿರುತ್ತಾರೆ?

ಅ) I & II

ಆ) I

ಇ) II & III

ಈ) I, II & III

I, II & III

www.karunaduexams.com

96. ನರೇಗಾ ಯೋಜನೆಯ ಉದ್ಯೋಗ ಚೀಟಿಯು ಯೋಜನೆಯ ಯಾವ ನಮೂನೆಯಾಗಿದೆ?

ಅ) ನಮೂನೆ-1

ಆ) ನಮೂನೆ-3

ಇ) ನಮೂನೆ-4

ಈ) ನಮೂನೆ-5

ನಮೂನೆ-4

97. ನರೇಗಾಗೆ ಸಂಬಂಧಿಸಿದಂತೆ ಈ ಕೆಳಗಿನ ಹೇಳಿಕೆಗಳನ್ನು ಗಮನಿಸಿ:

I) ಜಾಗೃತಿ ಮತ್ತು ಉಸ್ತುವಾರಿ ಸಮಿತಿಯಲ್ಲಿ ಒಂಬತ್ತು ಸದಸ್ಯರು ಇರತಕ್ಕದ್ದು

II) ಜಾಗೃತಿ ಮತ್ತು ಉಸ್ತುವಾರಿ ಸಮಿತಿಯಲ್ಲಿ ಶೇ 50% ನೋಂದಾಯಿತ ಕಾರ್ಮಿಕರು ಇರತಕ್ಕದ್ದು

III) ಗ್ರಾಮ ಪಂಚಾಯತಿಯ ಗ್ರಾಮ ನೀರು ಮತ್ತು ನೈರ್ಮಲ್ಯ ಸಮಿತಿ ಯೋಜನೆಯ ಜಾಗೃತಿ ಮತ್ತು ಉಸ್ತುವಾರಿ ಸಮಿತಿಯಾಗಿ ಕಾರ್ಯನಿರ್ವಹಿಸತಕ್ಕದ್ದು.

ಮೇಲಿನ ಯಾವ ಹೇಳಿಕೆ/ ಹೇಳಿಕೆಗಳನ್ನು ಸರಿಯಾಗಿವೆ?

ಅ) I ಮಾತ್ರ

ಆ) II ಮಾತ್ರ

ಇ) I & II ಮಾತ್ರ

ಈ)ಮೇಲಿನ ಎಲ್ಲವು

ಮೇಲಿನ ಎಲ್ಲವು

98. ನರೇಗಾ ಯೋಜನೆಯ ಅನುಷ್ಠಾನಕ್ಕೆ ತಗಲುವ ವೆಚ್ಚವನ್ನು ಯಾವುದರಿಂದ ಭರಿಸತಕ್ಕದ್ದು?

ಅ) ಯೋಜನೆಯ ಶೇ 6% ಆಡಳಿತಾತ್ಮಕ ವೆಚ್ಚ

ಆ) ಗ್ರಾಮ ಪಂಚಾಯತಿಯ ವರ್ಗ-1

ಇ) 14ನೇ ಹಣಕಾಸು ಯೋಜನೆ

ಈ) ಮೇಲಿನ ಎಲ್ಲದರಿಂದ

ಯೋಜನೆಯ ಶೇ 6% ಆಡಳಿತಾತ್ಮಕ ವೆಚ್ಚ

www.karunaduexams.com

99. ಚಂದ್ರಪನ್ನ ಕುಟುಂಬವು ಮಂಡಗದ್ದೆ ಗ್ರಾಮ ಪಂಚಾಯತಿಯಲ್ಲಿ ನರೇಗಾ ಯೋಜನೆಯಡಿ ನೋಂದಾಣಿಯಾಗಿದ್ದು, ಕಾರಣಾಂತರಗಳಿಂದ ಈ ಕುಟುಂಬವು ಖಾಯಂ ಆಗಿ ನಗರಕ್ಕೆ ವರ್ಗಾವಣೆಗೊಂಡಿದೆ. ಗ್ರಾಮ ಪಂಚಾಯತಿಯು ಚಂದ್ರಪ್ಪನ ನೋಂದಾಣಿಯನ್ನು ______?

ಅ) ರದ್ದುಪಡಿಸಬೇಕು

ಆ) ಮುಂದುವರೆಸಬೇಕು

ಇ) ತಾತ್ಕಲಿಕವಾಗಿ ತಡೆಹಿಡಿಯಬೇಕು

ಈ) ದಂಡ ಕಟ್ಟಿಸಿಕೊಂಡು ರದ್ದುಪಡಿಸಬೇಕು

ರದ್ದುಪಡಿಸಬೇಕು

100. ನರೇಗಾ ಅಧಿನಿಯಮದ ಪ್ರಕಾರ ನಿರುದ್ಯೋಗ ಭತ್ಯೆಯನ್ನು ಭರಿಸುವ ಜವಾಬ್ದಾರಿ ________?

ಅ) ಕೇಂದ್ರ ಸರ್ಕಾರದ್ದು

ಆ) ರಾಜ್ಯ ಸರ್ಕಾರದ್ದು

ಇ) ಗ್ರಾಮ ಪಂಚಾಯತಿ

ಈ) ಅನುಷ್ಠಾನ ಅಧಿಕಾರಿ

ರಾಜ್ಯ ಸರ್ಕಾರದ್ದು

www.karunaduexams.com